ಆದ್ದರಿಂದ, ಮಳೆಗಾಲದಲ್ಲಿ ಕೊಡಗಿನಲ್ಲಿರುವವರಿಗೆ ಯಾರ್‍ಯಾರಿಗೆ ಗ್ಯಾಸ್ ಕನೆಕ್ಷನ್‌ನ ಅನುಮತಿಯನ್ನು ಕೊಟ್ಟಿದ್ದಾರೆ. ಅವರಿಗೆ ಸೀಮೆಎಣ್ಣೆ ಕೂಡ ದೊರಕಿಸಿಕೊಡುವಂಥ ಒಂದು ಸೂಚನೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಬಡವರು, ಕಾರ್ಮಿಕರು ಇವತ್ತು ಕಾಫಿ ತೋಟದಲ್ಲಿಯೇ ಕೆಲಸ ಮಾಡಲಿ ಯಾವುದೇ ತೋಟದಲ್ಲಿ ಕೆಲಸ ಮಾಡಲಿ ಅಥವಾ ಬೇರೆ ಕಡೆ ಕೆಲಸ ಮಾಡಲಿ. ಬಡವರಿಗೆಲ್ಲರಿಗೂ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಕಟ್ಟುನಿಟ್ಟಿನ ಆದೇಶವನ್ನು ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳಿಗೆ ಕೂಡಲೇ ಕೊಡುತ್ತೇವೆ. ಇವತ್ತು ಅವರು ಸೀಮೆಎಣ್ಣೆ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಇವತ್ತು ಸೀಮೆಎಣ್ಣೆ ಹೆಚ್ಚಿಗೆ ಅಲಾಟ್‌ಮೆಂಟ್ ಬರುತ್ತಿಲ್ಲ. ಸೀಮೆಎಣ್ಣೆ ಕೊಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಎಲ್ಲೆಲ್ಲಿ ಕರೆಂಟ್ ಇರುವುದಿಲ್ಲ, ಅಂಥಲ್ಲಿ ಕೊಡಬೇಕೆಂದು ಕೇಳಿದ್ದೇವೆ. ಅದಕ್ಕಾಗಿ ಇವತ್ತು ಸ್ವಲ್ಪ ಮಟ್ಟಿಗೆ ಮಳೆಗಾಲದಲ್ಲಿ ತೊಂದರೆಯಾಗುತ್ತದೆ. ಕೊಡಗು, ಚಿಕ್ಕಮಗಳೂರು, ಹಾಸನ ಇಂಥ ಜಿಲ್ಲೆಗಳಿಗೆ, ಎಲ್ಲೆಲ್ಲಿ ಗುಡ್ಡಗಾಡು ಪ್ರದೇಶಗಳಿವೆ, ಎಲ್ಲೆಲ್ಲಿ ಕರೆಂಟ್‌ಗೆ ತೊಂದರೆ ಇದೆ, ಅಲ್ಲಿ ಕೊಡಬೇಕೆಂದು ಹೆಚ್ಚುವರಿ ಅಲಾಟ್‌ಮೆಂಟ್ ಅನ್ನು ಈಗಾಗಲೇ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳಗೆ ಬಿಡುಗಡೆ ಮಡಿದ್ದೇವೆ. ಅಲ್ಲಿ ಜಿಲ್ಲಾಧಿಕಾರಿಗಳು ಇದನ್ನು ಹೊಂದಾಣಿಕೆ ಮಾಡಿಕೊಡಲಿಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಇದಲ್ಲದೆ, ಇವತ್ತು ಹೇಳುತ್ತಿದ್ದಾರೆ, 70 ರೂಪಾಯಿ ಪಗಾರ ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದಾರೆ. ಈ ಆದಾಯದ ಮಿತಿ ಬರುವುದರಿಂದ ಸ್ವಲ್ಪ ಮಟ್ಟಿಗೆ ಜಿಲ್ಲಾಧಿಕಾರಿಗಳಿಗೂ ತೊಂದರೆಯಾಗಿದೆ. ಜಿಲ್ಲಾಧಿಕಾರಿಗಳಿಗೆ liberal ಆಗಿ ಯಾರ್‍ಯಾರು ಕಾರ್ಮಿಕರಿದ್ದಾರೆ, ಯಾರು ಭೂಮಿ ಇಲ್ಲದವರಾಗಿದ್ದಾರೆ, ಅವರೆಲ್ಲರಿಗೂ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ.

10. ನಿಯಮ 69ರ ಮೇಲೆ ನಡೆದ ಚರ್ಚೆಗೆ ಉತ್ತರ

ವಿಷಯ:-ಜವಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ ನಿರ್ಮಾಣ ಯೋಜನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ-

ಅಧ್ಯಕ್ಷರು: ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ ನಿರ್ಮಾಣ ಯೋಜನೆಯ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರಿಂದ ಉತ್ತರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ವಿರೋಧ ಪಕ್ಷದ ನಾಯಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರತಕ್ಕಂಥ ಒಂದು ದೊಡ್ಡ ಮಟ್ಟದ ಅವ್ಯವಹಾರ ಭ್ರಷ್ಟಾಚಾರದ ಬಗ್ಗೆ ಈ ಸದನದ ಗಮನ ಸೆಳೆಯತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ದಿವಸ ಆ ವಿಷಯವನ್ನು ಸದನದ ಮುಂದೆ ತರತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ನಾನು ಎಲ್ಲ ವಿಷಯವನ್ನು ಸುದೀರ್ಘವಾಗಿ ಎಳೆಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇಲ್ಲಿಯವರೆಗೆ ಗಣಿ ಹಗರಣಗಳು, ಸೈಟ್ ಹಗರಣಗಳ ಬೇರೆ ಬೇರೆ ರೀತಿಯಲ್ಲಿ ನಡೆಯುತ್ತಿತ್ತು. ಈಗ ಮಲ ಮೂತ್ರ ಹಗರಣಗಳ ಬಗ್ಗೆ ಈ ಸದನದಲ್ಲಿ ಚರ್ಚೆಯಾಗತಕ್ಕಂಥ ಒಂದು ವಾತಾವರಣ ಇವತ್ತಿನ ದಿವಸ ನಿರ್ಮಾಣವಾಗಿದೆ. ಮಲ ಮೂತ್ರ ಹಗರಣದ ವಿಷಯವಾಗಿ ಬಹಳ ಸುದೀರ್ಘವಾಗಿ ಮಾನ್ಯ ಸದಸ್ಯರು ಚರ್ಚೆಯನ್ನು ಮಾಡಿದ್ದಾರೆ. ಒಂದು ವಿಷಯವನ್ನು ಅವರು ನೋಟಿಸ್‌ನಲ್ಲಿ ಕಳುಹಿಸಿದ್ದಾರೆ. ಅದೇನೆಂದರೆ, "ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ ನಿರ್ಮಾಣ ಯೋಜನೆಯಡಿಯಲ್ಲಿ 643 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಇತ್ತೀಚೆಗೆ ಮಳೆ ನೀರಿನ ನಾಲ್ಕು ಪ್ರಧಾನ ಹಾಗೂ ಉಪಪ್ರಧಾನ ಕಣಿವೆಗಳ ಪುನರ್ ನವೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಈ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಪಾರದರ್ಶಕವಾಗಿ ಅನುಸರಣಾ ವಿಧಾನಗಳನ್ನು ಗಾಳಿಗೆ ತೂರಿ ಭಾರಿ ಭ್ರಷ್ಟಾಚಾರ ನಡೆಸಿ 643 ಕೋಟಿ ರೂಪಾಯಿ ಹಣವನ್ನು ಆಯ್ದ ಖಾಸಗಿ ಗುತ್ತಿಗೆದಾರರ ಕೂಟದಿಂದ ಶಾಮೀಲಾಗಿ ನುಂಗಿ ಹಾಕಲಾಗಿದೆ" ಎಂಬ ವಿಷಯವನ್ನು ಈ ಸದನದ ಮುಂದೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ಒಂದು ಯೋಜನೆಯ ಅಡಿಯಲ್ಲಿ 643 ಕೋಟಿ ರೂಪಾಯಿಗಳಿಗೆ ಅನುಮೋದನೆ ದೊರಕಿದ್ದು, ಈ ಒಂದು ಕೆಲಸ 167.98 ಕೋಟಿ ರೂಪಾಯಿಗಳ ಪ್ರಗತಿಯನ್ನು ಇವತ್ತಿನ ದಿವಸ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಮಾಡಿದೆ. ಈ ನಾಲ್ಕು ಕಣಿವೆ ಪ್ರದೇಶ ಕಾಮಗಾರಿಯ ಯೋಜನೆಯನ್ನು ಅಂತಿಮವಾಗಿ ಕೈಗೆತ್ತಿಕೊಂಡಾಗ 15 ಪ್ಯಾಕೇಜ್‌ಗಳಲ್ಲಿ ಟೆಂಡರ್ ಗುತ್ತಿಗೆಯನ್ನು 496 ಕೋಟಿ ರೂಪಾಯಿಗಳಿಗೆ ಮಾಡಲಾಗಿದೆ ಎಂಬ

ವಿಷಯವನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪ್ರಮುಖವಾಗಿ ನಮ್ಮ ವಿರೋಧ ಪಕ್ಷದ ನಾಯಕರು ಮಾತಾನಾಡತಕ್ಕಂಥ ಸಂದರ್ಭದಲ್ಲಿ ಸುಮಾರು 64 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆಗಿರುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಇದರ ಬಗ್ಗೆ ಬಹಳ ಮೆಟೀರಿಯಲ್ ಇದೆ. ಆದ್ದರಿಂದ, ಹೆಚ್ಚಿನ ಚರ್ಚೆ ಆಗಬೇಕೆಂದು ಈ ಸದನದಲ್ಲಿ ಪ್ರಸ್ತಾಪ ಕೂಡ ಮಾಡಿದ್ದಾರೆ. ಸನ್ಮಾನ್ಯ ಡಿ.ಕೆ.ಶಿವಕುಮಾರ್‌ರವರ ಹತ್ತಿರ ಸಾಕಷ್ಟು ಮೆಟೀರಿಯಲ್ ಇದೆ ಎಂದು ಮತ್ತು ಅದರ ಜೊತೆಗೆ He is very expert ಎನ್ನತಕ್ಕಂಥ ವಿಷಯಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಬೃಹತ್ ಮಹಾನಗರ ಪಾಲಿಕೆಯಲ್ಲಿ ನಡೆದಿರತಕ್ಕಂಥ ಮಲಮೂತ್ರ ಹಗರಣಗಳ ಬಗ್ಗೆ ಅವರು ಕೂಡ ಚರ್ಚೆಯನ್ನು ಮಾಡಿದ್ದಾರೆ. ನಜಕ್ಕೂ ಅವರಿಗೆ ಅಭಿನಂಧನೆ ಸಲ್ಲಿಸಬೇಕಾಗುತ್ತದೆ. ಅವರು ಮಾತನಾಡಿರತಕ್ಕಂಥ ವಿಚಾರವನ್ನು ನಾನು ಗಮನಸಿದ್ದೇನೆ. ನನ್ನೆ ದಿವಸ ಮತ್ತು ಇವತ್ತು ಬೆಳಿಗ್ಗೆ ಕೂಡ ನಾನು ಇರಲಿಲ್ಲ. ಅವರು ಬಹಳ ಸುದೀರ್ಘವಾಗಿ ಒಂದು ದೊಡ್ಡ ಸಂಶೋಧನೆ ಮಾಡಿದ್ದಾರೆ. ಈಗಾಗಲೇ ಎಂ.ಎ. ಗ್ರಾಜ್ಯುಯೇಟ್ ಆಗಿದ್ದಾರೆ. ಬಹುಶಃ ಡಾಕ್ಟರೇಟ್ ಮಾಡುವುದಕ್ಕೆ ಇದನ್ನೆ ಒಂದು ಮುಖ್ಯವಾದ ವಿಷಯವನ್ನಾಗಿ ತೆಗೆದುಕೊಳ್ಳುವುದರ ಮುಖಾಂತರ ಮತ್ತೆ ಇದರ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಳ್ಳಲೆಂದು ಈ ಸಂದರ್ಭದಲ್ಲಿ ನಾನು ಆಶಿಸುತ್ತೇನೆ. ಹೂಳೆತ್ತುವಂಥ 10.93 ಲಕ್ಷ ಕ್ಯೂಬಿಕ್ ಮೀಟರ್‌ನಷ್ಟು ಕಾಮಗಾರಿಗೆ 16.54 ಕೋಟಿ ರೂಪಾಯಿಗಳ ಆಂದಾಜು ವೆಚ್ಚವನ್ನು ತಯಾರು ಮಾಡಿದ್ದರು. ಆದರೆ, ತದನಂತರ ಅಂದರೆ, ಈ ಒಂದು ಕಾಮಗಾರಿ ಪ್ರಾರಂಭವಾದ ಮೇಲೆ ಅದು ಸುಮಾರು 14.52 ಲಕ್ಷ ಕ್ಯೂಬಿಕ್ ಮೀಟರ್‌ವರೆಗೆ ಅಂತಿಮವಾದ ಒಂದು ರೀ-ಎಸ್ಟೀಮೇಟ್ ಆಗಿದೆ. ಇದರಲ್ಲಿ ಒಟ್ಟು 18.637 ಕೋಟಿ ರೂಪಾಯಿಗಳಷ್ಟು ಪೇಮೆಂಟ್ ಆಗಿದೆ. ಎಂದು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ಒಂದು ಪ್ಯಾಕೇಜ್‌ನಲ್ಲಿ 5% ಹೂಳೆತ್ತುವ ಕಾರ್ಯಕ್ರಮವನ್ನು ಈ ಒಂದು ವ್ಯಾಪ್ತಿಯಲ್ಲಿ ತಂದಿದ್ದಾರೆಂದು ಸದನದ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಮತ್ತೆ ಅವರು ಈ ವಿಷಯವನ್ನು ಪ್ರಸ್ತಾಪ ಮಾಡಿ ಕೆಲವು ವಿಷಯಗಳಿಗೆ ಅವರೇ ಉತ್ತರವನ್ನು ಕೊಟ್ಟಿರತಕ್ಕಂಥದನ್ನು ನಾನು ಗಮನಸಿದ್ದೇನೆ ಅಂದರೆ, ಇದರಲ್ಲಿ ಯಾವ್ಯಾವ ರೀತಿಯಲ್ಲಿ ತಪ್ಪುಗಳಾಗಿವೆ ಎಂದು ಹೇಳುತ್ತಾ ಅವರ ಮಾತನಾಡಿರತಕ್ಕಂಥದನ್ನು ಒಟ್ಟಾರೆಯಾಗಿ ಗಮನಸಿದರೆ ಒಬ್ಬ ಅಧಿಕಾರಿಯನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿದ್ದಾರೆಂದು ನನಗೆ

ಅನಿಸಿತು. ಈ ಒಂದು ಕಾಮಗಾರಿಗಳಿಗೆ JNNURM ಅಡಿಯಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಹಣ ಕೊಟ್ಟಿದ್ದಾರೆಂದು ಹೇಳಿದ್ದಾರೆ. JNNURM ಯೋಜನೆಯನ್ನು ತಯಾರು ಮಾಡುವುದಕ್ಕಿಂತ ಮುಂಚೆಯೇ ಇಲ್ಲಿ ಹಿಂದೆ ಮಳೆಗಾಲದಲ್ಲಿ ಆದಂಥ ಕೆಲವು ತೊಂದರೆಗಳಿಂದ ಕಾರ್ಪೋರೇಷನ್‌ನಿಂದ ಇದಕ್ಕೆ ಸಂಬಂಧಪಟ್ಟಂಥ ಕೆಲಸಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಒಂದು ಕಾರ್ಯಕ್ರಮವನ್ನು ಸಿದ್ದಪಡಿಸಿದ್ದರು. ಅದೇ ಸಂದರ್ಭದಲ್ಲಿ JNNURM ಯೋಜನೆಯನ್ನು ಸಿದ್ದಪಡಿಸಿದ್ದರು. ಈ ಒಂದು ಕೆಲಸಗಳನ್ನು JNNURM ವ್ಯಾಪ್ತಿಗೆ ತರುವುದಕ್ಕೆ ತೀರ್ಮಾನ ಮಾಡಿದ್ದಾರೆ. ಈ ನಾಲ್ಕು ಪ್ಯಾಕೇಜ್‌ಗಳಲ್ಲಿ ಕೇವಲ ಹೂಳೆತ್ತುವುದಕ್ಕೆ ಮಾತ್ರ ಮಾಡಿಲ್ಲ, ಇದರ ಬಗ್ಗೆ ತಾವೇ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ ನಾನು ಮತ್ತೆ ರಿಪೀಟ್ ಮಾಡತಕ್ಕಂಥದ್ದು ಅನಾವಶ್ಯಕವೆಂದು ಕಾಣಿಸುತ್ತದೆ. ಒಟ್ಟು 12 ಕಾಮಗಾರಿಗಳನ್ನು ಈ ಒಂದು ಪ್ಯಾಕೇಜ್‌ನಲ್ಲಿ ಅಳವಡಿಸಿ ಈ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ತೀರ್ಮಾನ ಮಾಡಿದ್ದಾರೆ. 2003ನೇ ಇಸವಿಯಲ್ಲಿ ಇದಕ್ಕೆ ಮೊದಲು ಅಧಿಸೂಚನೆ ಹೊರಡಿಸಲಾಗಿದೆ.12.01.2005 ರವರೆಗೆ ಹಲವಾರು ಹಂತಗಳಲ್ಲಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಈ ಒಂದು ಟೆಂಡರ್‌ನ್ನು ಕರೆದ ನಂತರ ಪಾಲಿಕೆ ತೆಗೆದುಕೊಂಡಿರತಕ್ಕಂಥ ನಿರ್ಣಯಗಳ ದಿನಾಂಕಗಳು ಯಾವುದೆಂದರೆ, 5.02.2004ನೇ ಇಸವಿಯಿಂದ 27.06.2005ನೇ ಇಸವಿಯವರೆಗೆ ಪಾಲಿಕೆಯಲ್ಲಿ ಇದರ ಬಗ್ಗೆ ನಿರ್ಣಯಗಳನ್ನು ಮಾಡಿದ್ದಾರೆ. ಈ ನಿರ್ಣಯಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಶಾಸಕರುಗಳನ್ನು, ಚುನಾಯಿತ ಪ್ರತಿನಿಧಿಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಆದರೆ, ಅದು ತಪ್ಪು. ಬೆಂಗಳೂರು ಮಹಾನಗರ ಪಾಲಿಕೆ ಈ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಚುನಾಯಿತ ಪ್ರತಿನಿಧಿಗಳು ಇದ್ದಂಥ ಸಂದರ್ಭದಲ್ಲಿ ಈ ಒಂದು ಕಾರ್ಯಕ್ರಮಗಳಿಗೆ ಅನುಮೋದನೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಅಧಿಕಾರಿಗಳು ಸ್ವೇಚ್ಛಾಚಾರವಾಗಿ ತೀರ್ಮಾನ ಮಾಡಿದ್ದಾರೆಂದು ಒಬ್ಬ ಅಧಿಕಾರಿಯ ಮೇಲೆ ಗೂಬೆ ಕೂರಿಸುವುದಕ್ಕೆ ಆಗುವುದಿಲ್ಲ. ಇವುಗಳ ಬಗ್ಗೆ ತೀರ್ಮಾನ ಮಾಡುವಂಥ ಸಂದರ್ಭದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಮತ್ತು ವರ್ಕ್ಸ್ ಕಮಿಟಿ ಛೇರ್ಮನ್‌ಗಳೆಲ್ಲರೂ ಯಾವ ಪಕ್ಷದವರಿದ್ದರೆಂದು ಮತ್ತು ಯಾವ ಪಕ್ಷ ಅಧಿಕಾರದಲ್ಲಿತ್ತೋ ಅದೇ ಪಕ್ಷದ ಮುಖಂಡರುಗಳೇ ಇದನ್ನು ಪ್ರಸ್ತಾಪ ಮಾಡಿ ಇದೊಂದು ದೊಡ್ಡ ಹಗರಣ ಎನ್ನುವ ರೀತಿಯಲ್ಲಿ ಬಿಂಬಿಸಲಿಕ್ಕೆ ಹೊರಟಿದ್ದಾರೆ. ಈ ಒಂದು ಹೂಳೆತ್ತುವಂಥ

ಕೆಲಸಕ್ಕೆ 22 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡುವುದಕ್ಕೆ ಮೊದಲು ತೀರ್ಮಾನವಾಗಿತ್ತು. ಹೊಸದಾಗಿ ಈಗ ಮಹಾನಗರ ಪಾಲಿಕೆ ಆಯುಕ್ತರವರನ್ನು ನೇಮಕ ಮಾಡಿದ್ದೇವೆ. ಅವರು ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡತಕ್ಕಂಥ ಸಂದರ್ಭದಲ್ಲಿ ಟ್ರಾನ್ಸ್‌ಪೋಟೇಶನ್‌ಗೆ ಕೊಟ್ಟಿರುವ ದುಡ್ಡಿನಲ್ಲಿ ತಪ್ಪಾಗಿದೆ. ಎಂಬ ವಿಷಯ ಅವರ ಗಮನಕ್ಕೆ ಬಂದ ನಂತರ 22 ಕೋಟಿ ರೂಪಾಯಿಗಳಲ್ಲಿ 4 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿ ಈಗ 18 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರ ಒಬ್ಬ ಅಧಿಕಾರಿಯಿಂದ ಆಯಿತೆಂಬುದರ ಬಗ್ಗೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಇದರ ಬಗ್ಗೆ ನಿರ್ಣಯಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳೇ ಪ್ರಮುಖವಾದಂಥ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಇದೊಂದು ದೊಡ್ಡ ಹಗರಣವೆಂದು ಇವರೇನು ಹೇಳುತ್ತಿದ್ದಾರೆ. 167.95 ಕೋಟಿ ರೂಪಾಯಿಗಳವರೆಗೆ ಆರ್ಥಿಕ ಪ್ರಗತಿ ಕೂಡ ಆಗಿದೆ. 3.08.2007ರವರೆಗೆ 138.89 ಕೋಟಿ ರೂಪಾಯಿಗಳಷ್ಟು ಹಣ ಪಾವತಿಯಾಗಿರುವ ವಿಷಯವನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಬೇರೆ ಬೇರೆ ಹಂತದಲ್ಲಿ ಈಗ ಕೆಲಸಗಳು ನಡೆಯುತ್ತಿವೆ. ಖಾಸಗಿ ಗುತ್ತಿಗೆದಾರರ ಕೂಟ 643 ಕೋಟಿ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿದ್ದಾರೆಂದು ತಾವು ಹೇಳಿದ್ದೀರಿ. ಈ ಖಾಸಗಿ ಗುತ್ತಿಗೆದಾರರ ಕೂಟದ ಬಗ್ಗೆ ಹೇಳುವುದಾದರೆ, ನೀವು ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಇವರೆಲ್ಲರನ್ನು ಕರೆದಿದ್ದೀರಿ. ಅವರೆಲ್ಲರೂ ಕೂಡ ಅವತ್ತು ಪಾರ್ಟಿಸಿಪೇಟ್ ಮಾಡಿದ್ದಾರೆ. ಮತ್ತೆ ನಿಮ್ಮ ಒಂದು ಅಧಿಕಾರದ ಅವಧಿಯಲ್ಲಿಯೇ ಇದಕ್ಕೆ ತೀರ್ಮಾನ ತೆಗೆದುಕೊಂಡಿರುವುದರ ಜೊತೆಗೆ ನಿರ್ಣಯ ಕೂಡ ಮಾಡಲಾಗಿದೆ. ಆಗ ನಿಮಗೆ ಈ ಒಂದು ಖಾಸಗಿ ಗುತ್ತಿಗೆದಾರರ ಕೂಟದ ಸಂಚು ನಮ್ಮ ಗಮನಕ್ಕೆ ಬರಲಿಲ್ಲವೇ ಎಂದು ಪ್ರಶ್ನೆ ಮಾಡಬೇಕಾಗುತ್ತದೆ? ಈ ಒಂದು ವಿಷಯದಲ್ಲಿ ಲೋಕಾಯುಕ್ತ ಸಂಸ್ಥೆಯಿಂದ ತನಿಖೆ ನಡೆಯತಕ್ಕಂಥ ಸಂದರ್ಭದಲ್ಲಿ ತಾವು ಈಗ ಇದರ ಬಗ್ಗೆ ಸಿಬಿಐ ತನಿಖೆಯಾಗಲೇಬೇಕೆಂದು ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದು ಅನಾವಶ್ಯಕ ಇವತ್ತು ಲೋಕಾಯುಕ್ತ ಸಂಸ್ಥೆ ಇವತ್ತು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ನಿಮ್ಮ ಹತ್ತಿರ ಬೇರೆ ಬೇರೆ ರೀತಿಯ ಮಾಹಿತಿಗಳು ಇದ್ದರೆ, ಇವತ್ತು ನೀವು ಲೋಕಾಯುಕ್ತರ ಮುಂದೆ ಕೊಡುವುದಕ್ಕೆ ಯಾರದೇ ತಡೆಯಿಲ್ಲವೆಂದು ನಾನು ಹೇಳಲು ಬಯಸುತ್ತೇನೆ. ಇವತ್ತು ಕೇಂದ್ರ ಸರ್ಕಾರದಿಂದ ಒಂದು ಕಾರ್ಯಕ್ರಮಕ್ಕೆ

ನೀವು ಏನು 50% ಎಂದು ಹೇಳಿದ್ದೀರಿ, ಇದರಲ್ಲಿ ಕೇಂದ್ರ ಸರ್ಕಾರದ ಒಂದು ಪಾಲು, ಅದು 35% ಕೇಂದ್ರ ಸರ್ಕಾರದ್ದು 15% ರಾಜ್ಯ ಸರ್ಕಾರದ್ದು, 50% ಆ ಸ್ಥಳೀಯ ಸಂಸ್ಥೆಗಳಿಂದ ಇವತ್ತು ಹಣ ಹೂಡಿಕೆ ಮಾಡುವಂತಹ ಪಾಲು ಏನಿದೆ, ಕೇಂದ್ರ ಸರ್ಕಾರದ 50% ಅಲ್ಲ ಅದು 35% ಎನ್ನುವುದನ್ನು ನಾನು ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರಲ್ಲಿ ಸಣ್ಣ ಪುಟ್ಟ ದೋಷಗಳು ನಡೆಯುತ್ತವೆನ್ನುವಂತಹದ್ದು ಏಕೆಂದರೆ ಕಾರ್ಪೋರೇಷನ್ ಏನು ಸಂಸ್ಥೆಯಲ್ಲಿ ಅಷ್ಟರಲ್ಲಿ ಒಳ್ಳೆಯ ಕೆಲಸಗಳು ಆದವು. ಹಲವಾರು ರೀತಿಯ ಕೆಲವು ಲೋಪದೋಷಗಳು ಈ ಸರ್ಕಾರದ ಎಲ್ಲ ವ್ಯವಸ್ಥೆಗಳಲ್ಲೂ ಇರತಕ್ಕಂತಹುದ್ದನ್ನು ನಾವು ಮತ್ತು ನೀವುಗಳು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ನನಗಿಂತ ಹೆಚ್ಚಾಗಿ ಬೆಂಗಳೂರಿನ ಕಾರ್ಪೋರೇಷನ್ ಬಗ್ಗೆ ಸನ್ಮಾನ್ಯ ಸೋಮಣ್ಣನವರು ಸುದೀರ್ಘ ಅವಧಿಗೆ ಶಾಸಕರಾಗಿದ್ದವರು. ಮಾನ್ಯ ರೋಷನ್ ಬೇಗ್‌ರವರು ಕೂಡ ಶಾಸಕರಾಗಿದ್ದವರು ಶ್ರೀ ನರೇಂದ್ರಬಾಬು ಹಾಗೂ ಶ್ರೀ ದಿನೇಶ್‌ಗುಂಡೂರಾವ್‌ರವರು ಈಗ ಏನು ಹೊಸದಾಗಿ ಬಂದಿದ್ದಾರೆ, ಇವತ್ತು ನನಗಿಂತ ಹೆಚ್ಚಾಗಿ ಅವರಿಗೆ ಈ ಒಂದು ಬೆಂಗಳೂರು ಮಹಾನಗರ ಪಾಲಿಕೆಯ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿಯೂ ಇದೆ. ಮಾನ್ಯ ಸೋಮಣ್ಣನವರು ಹಾಗೂ ಮಾನ್ಯ ರೋಷನ್ ಬೇಗ್‌ರವರಿಗೆ ಹೆಚ್ಚಿನ ಮಾಹಿತಿ ಇರಬಹುದು ಎಂದು ನಾನು ಅಂದುಕೊಂಡಿದ್ದೇನೆ. ಇವತ್ತು ಏನು JNNURM ವ್ಯಾಪ್ತಿಯೊಳಗೆ ಕಾರ್ಯಕ್ರಮಗಳು ಪ್ರಾರಂಭವಾಗಿದೆ, ಇವತ್ತು ಒಳ್ಳೆಯ ಅಧಿಕಾರಿಗಳನ್ನು ಆ ಒಂದು ಜಾಗದಲ್ಲಿ ತಂದಿದ್ದೇವೆ. ಹಿಂದೆ ನಡೆದಿರತಕ್ಕಂತಹ ಸಣ್ಣ ಪುಟ್ಟ ಲೋಪದೋಷಗಳ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ಏನು ಬಂದಿದೆ, ಅದರ ಬಗ್ಗೆ ನಾನು ಕೆಲವು ಮಾಹಿತಿಗಳನ್ನು ಸಂಗ್ರಹ ಮಾಡುವುದಕ್ಕೆ ಈಗಾಗಲೇ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಏನಾದರೂ ಲೋಪದೋಷಗಳು ಆಗಿರುವ ಬಗ್ಗೆ ಸಣ್ಣಪುಟ್ಟ ವಿಷಯಗಳು ಏನಿವೆ, ನೀವು ಹೇಳುವಂತಹ ದೊಡ್ಡ ಮಟ್ಟದಲ್ಲಿ ಆಗಿಲ್ಲವೆಂದು ನಾನು ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ನಾನು ಮಾಹಿತಿಗಳನ್ನು ಪಡೆದ ನಂತರ ಯಾರು ತಪ್ಪಿತಸ್ಥರು ಇದ್ದಾರೆ., ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಹಿಂದೆ ಸರಿಯುವಂತಹ ಪ್ರಶ್ನೆ ಇಲ್ಲ. ಇವತ್ತು ಆ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದು ಏನು ಸದಸ್ಯರು ಈ ಒಂದು ವಿಷಯದಲ್ಲಿ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ, ಈ ಒಂದು ಹಣ ದುರುಪಯೋಗವಾಗಬಾರದು ಎಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ಸಹಮತವಿದೆ. ಇದರಲ್ಲಿ ಏನಾದರೂ ಭ್ರಷ್ಟಾಚಾರಗಳು ನಡೆದಿದ್ದರೆ,

ಏಕೆಂದರೆ ಅದರ ಬಗ್ಗೆ ನೀವೇ ಹೇಳಿದ್ದೀರಿ, ಮುಖ್ಯಮಂತ್ರಿಗಳ ಹೆಸರಿನಲ್ಲಿ 10%, ಜಿಲ್ಲಾ ಮಂತ್ರಿಗಳ ಹೆಸರಿನಲ್ಲಿ 2%, ಮತ್ತು ಕೇಂದ್ರ ಸಚಿವರ ಹೆಸರನ್ನು ಸಹ ಹೇಳಿದ್ದೀರಿ, ಅವರ ಹೆಸರಿನಲ್ಲಿ ಮಾಡಿದ್ದಾರೆಂದು ಹೊರಗಡೆ ಚರ್ಚೆ ಮಾಡುತ್ತಿದ್ದಾರೆಂದು ಹೇಳಿದ್ದೀರಿ. ಈ ರಾಜ್ಯದಲ್ಲಿ ಇದೇನು ಹೊಸದಲ್ಲ, ಈ ರಾಜಕಾರಣದ ವ್ಯವಸ್ಥೆಯೇ, ಇವತ್ತು ನಾವು ಮೌಲ್ಯವನ್ನು ಎತ್ತಿಹಿಡಿಯಬೇಕೆಂದು ಹೇಳುತ್ತಾ ಅಪಮೌಲ್ಯ ಮಾಡಿರುವುದು ಏನಿದೆ, ಇದರಲ್ಲಿ ಯಾರ್ಯಾರ ಪಾಲು ಎಷ್ಟು ಇದೆ, ರಾಜಕಾರಣಿಗಳದ್ದು ಎಷ್ಟು ಇದೆ, ಅಧಿಕಾರಿಗಳದ್ದು ಎಷ್ಟು ಇದೆ, ಇದರ ಬಗ್ಗೆ ಚರ್ಚೆ ಮಾಡತಕ್ಕಂತಹ ಮಟ್ಟಕ್ಕೆ ನಾನು ಇನ್ನು ಹೋಗಿಲ್ಲ. ಇವತ್ತು ನನಗಿಂತ ಎಲ್ಲಾ ಹಿರಿಯ ಸದಸ್ಯರುಗಳು ಇದ್ದೀರಿ. ರಾಜಕೀಯ ವ್ಯವಸ್ಥೆಗಳು, ಆಡಳಿತ ವ್ಯವಸ್ಥೆಗಳು, ಯಾವ ರೀತಿಯಾಗಿ ದಿನೇ ದಿನೇ ಕುಸಿಯುತ್ತಿರುವಂತಹ ರೀತಿಯಲ್ಲಿ ಯಾರ್ಯಾರ ಪಾಲು ಎಷ್ಟು ಇದೆ ಎಂಬುದರ ಬಗ್ಗೆ ಇದರ ಬಗ್ಗೆ ನಾವು ನಮ್ಮಲ್ಲಿಯೇ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿರುವಂತಹ ಸನ್ನಿವೇಶದಲ್ಲಿದ್ದೇವೆ. ಈ ಒಂದು ಮಹಾನಗರಪಾಲಿಕೆಯ 643 ಕೋಟಿ ರೂಪಾಯಿಗಳ ಒಂದು ಕಾಮಗಾರಿಗಳ ವಿಷಯದಲ್ಲಿ ಏನು ನಾನು ಈಗಾಗಲೇ ಮಾನ್ಯ ಸದಸ್ಯರುಗಳ ಗಮನಕ್ಕೆ ತಂದಿದ್ದೇನೆ. 138 ಕೋಟಿ ರೂಪಾಯಿಗಳವರೆಗೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಏನಾದರೂ ಲೋಪದೋಷಗಳು ನಡೆದಿರುವುದು, ಈಗಾಗಲೇ ಇದರ ಬಗ್ಗೆ ನಮ್ಮ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಇವತ್ತು ಅವರು ನಿಮ್ಮ ಹತ್ತಿರ ಮಾಹಿತಿಗಳು ಇದ್ದರೆ ಅದನ್ನು ದಯವಿಟ್ಟು ಕಳುಹಿಸಿದರೆ ನಾನು ಇವತ್ತು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ದನಿದ್ದೇನೆ. ಯಾವುದೇ ಅಧಿಕಾರಿಯೂ ತಪ್ಪು ಮಾಡಿರಲಿ, ಅವನು ದೊಡ್ಡ ಅಧಿಕಾರಿಯೇ ಆಗಿರಲಿ, ಸಣ್ಣ ಅಧಿಕಾರಿಯೇ ಆಗಿರಲಿ, ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ದನಿದ್ದೇನೆ. ಇದು ಕೇವಲ ಅಧಿಕಾರಿಗಳ ಮಟ್ಟದಲ್ಲಿ ಆಗಿರುವಂತಹ ನಿರ್ಣಯಗಳಲ್ಲ. ಇದು workers committee ಇರಬಹುದು, ಮೇಯರ್‌ಗಳು ಇರಬಹುದು, ಕೊನೆಯ ಹಂತದಲ್ಲಿ ಯಾವ ರೀತಿಯಾಗಿ ಅಧಿಕಾರಿಗಳ ಮೇಲೆ ಒತ್ತಡವನ್ನು ತಂದು ಈ ಕೆಲಸವನ್ನು ಸೇರಿಸಬೇಕು, ಆ ಕೆಲಸವನ್ನು ಸೇರಿಸಬೇಕೆಂದು ಹೇಳಿ ಚುನಾಯಿತ ಪ್ರತಿನಿಧಿಗಳು ಯಾವ ಯಾವ ರೀತಿಯಾಗಿ ಅಧಿಕಾರಿಗಳ ಮೇಲೆ ಒತ್ತಡಗಳನ್ನು ತಂದಿದ್ದಾರೆ, ಅದನ್ನು ಸಹ ನಾವು ಗಮನಿಸಬೇಕಾಗುತ್ತದೆ. ಕೇವಲ ಅಧಿಕಾರಿಗಳ ಮೇಲೆ ದೋಷ ಇದೆ ಎಂದು ಹೇಳುವುದರಿಂದ ಇವತ್ತು ಈ ಒಂದು ವ್ಯವಸ್ಥೆಯಲ್ಲಿ ಯಾರೋ ಒಬ್ಬರು ತಪ್ಪು ಮಾಡಿದ್ದಾರೆಂದು ಈ ಸದನದಲ್ಲಿ ಏನು ಚರ್ಚೆಗಳು

ನಡೆದಿವೆ, ಅದರ ಬಗ್ಗೆ ಏನಾದರೂ ಮಾಹಿತಿಗಳು ಇದ್ದರೆ ದಯಮಾಡಿ ಸದಸ್ಯರುಗಳು ಕೊಡಬೇಕೆಂದು ಹೇಳುತ್ತೇನೆ. ಅವರ ಮೇಲೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಸಿದ್ಧವಿದೆ ಎಂದು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ.

ಶ್ರೀ ಎನ್.ಧರ್ಮಸಿಂಗ್ (ವಿರೋಧಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಿಗಳು ಎಲ್ಲೆಲ್ಲಿ ಅವ್ಯವಹಾರಗಳು ನಡೆದಿವೆ, ಅದರ ಬಗ್ಗೆ, ಸ್ವಲ್ಪ ತನಿಖೆಯನ್ನು ಮಾಡುತ್ತೇನೆಂದು ಹೇಳಿದರು. ನಾವು ಯಾವಾಗಲೂ ಕೂಡ ಮುಖ್ಯಮಂತ್ರಿಗಳ ಮೇಲೆ ಆ ಆಪಾದನೆಯನ್ನು ಮಾಡತಕ್ಕಂತಹ ನೇರವಾಗಿ ಹೇಳಿಲ್ಲ. ಜನರು ಮಾತನಾಡತಕ್ಕಂತಹ ರೀತಿಯಲ್ಲಿ ಇವತ್ತು ಹೇಳಿರುವುದು. ಇದು ಒಂದು ವಿಶಿಷ್ಟವಾದಂತಹ ಕಾರ್ಯಕ್ರಮವಾಗಿದೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಶ್ರೀ ಜೈಪಾಲ್ ರೆಡ್ಡಿಯವರು ಸಂಬಂಧಪಟ್ಟ ಮಂತ್ರಿಗಳು ಏನು ಆಗಿದ್ದಾರೆ, ಬೆಳೆಯತಕ್ಕಂತಹ ನಗರಗಳಿಗೆ ಈ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಈಗಾಗಲೇ ತಾವು Greater Bangalore ಬಗ್ಗೆ ಒಂದು ಮಸೂದೆಯನ್ನು ತಂದಿದ್ದೀರಿ. ಬಹಳಷ್ಟು ಕೆಲಸಗಳನ್ನು ಮಾಡಬೇಕೆಂದು ತಾವು ಕನಸನ್ನು ಕೂಡ ಕಾಣುತ್ತಿದ್ದೀರಿ. ಇವತ್ತು ನಮಗೆ ಬಂದಿರುವಂತಹ ಮಾಹಿತಿಯ ಪ್ರಕಾರ ಇವತ್ತು ಕೂಡ ಅವರು Urban Development ಮಂತ್ರಿಗಳು ಆಗಿದ್ದಾರೆ. ಅವರಿಗೆ ಬಂದಿದೆ, ಇದರ ಬಗ್ಗೆ ತಮಗೂ ಕೂಡ ಬಂದಿರಬಹುದು. ಈ ಹೂಳು ಎತ್ತುವ ಕೆಲಸದಲ್ಲಿ 643 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂತಹದ್ದು. ಇದೊಂಗು ವಿಶಿಷ್ಟವಾದಂತಹ ಕಾರ್ಯಕ್ರಮವಾಗಿದೆ. ಇದಕ್ಕೆ 22,536 ಕೋಟಿ ರೂಪಾಯಿಗಳು ನಿಗದಿ, ಮಾಡಿದ್ದಾರೆ. ಅದನ್ನು ಅವರು ಹಂತ ಹಂತವಾಗಿ ಬಿಡುಗಡೆ ಮಾಡುತ್ತಾರೆ. 35% ಅವರದು, ಗೌರ್ನಮೆಂಟದು, ಮತ್ತೆ citizens consultation ನಿಂದ ಮಾಡತಕ್ಕಂತಹ ಕೆಲಸ. ಇದೇ ಪ್ರಾಥಮಿಕವಾದ ಹಂತದಲ್ಲಿ ಈ ಹೂಳು ಎತ್ತುವ ಕೆಲಸ ಏನು ಇದೆ, 643 ಕೋಟಿ ರೂಪಾಯಿಗಳು ಏನು ಇಟ್ಟಿದ್ದಾರೆ. ಈ ತರಹದ ಜನರಿಗೆ visibility ಬೇಕು. ಎಲ್ಲಿ ಹೂಳು ಎತ್ತಿದ್ದಾರೆ? ಎಲ್ಲಿ ಮಾಡುತ್ತಿದ್ದಾರೆ, there is no movement. ಇವತ್ತು ಖರ್ಚು ಆಗಿದೆಯೆನ್ನುವಂತಹ ರೀತಿಯಲ್ಲಿ ನಾವು ಕೇಳಲೇಬೇಕಾಗುತ್ತದೆ. ಬೃಹತ್ ಬೆಂಗಳೂರಿನಲ್ಲಿ ಆದರೂ ಕೂಡ ರಾಜಧಾನಿಯಲ್ಲಿರತಕ್ಕಂತಹ ಮಹಾನಗರ ಪಾಲಿಕೆಯಲ್ಲಿ ಇದರ ಬಗ್ಗೆ ಯಾರಾದರೂ ಕೂಡ ಇವತ್ತು ಅಲ್ಲಿ ನಡೆದಿರುವ ಬಗ್ಗೆ ಅಲ್ಲಿ ಒಬ್ಬ Assistant Engineer ,junior Engineer ಗಳನ್ನು

ಕೇಳುವುದಕ್ಕಾಗುವುದಿಲ್ಲ. ಇವತ್ತು ಕಾರ್ಪೋರೇಷನ್‌ನಲ್ಲಿ ಯಾರು ಮುಖ್ಯಸ್ಥರು ಆಗಿದ್ದಾರೆ, ಅಲ್ಲಿ ಏನು ನಡೆಯುತ್ತಿದೆ ಎನ್ನುವಂಥ ಪ್ರಸ್ತಾಪವನ್ನು ನಾವು ಮಾಡಿದ್ದೇವೆ. ಆದರೂ ಕೂಡ ಗಮನಕ್ಕೆ ಬಂದರೆ ನಾನು ತರಿಸುತ್ತೇನೆ, ನೋಡುತ್ತೇವೆನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. Karnataka ರಾಜಧಾನಿಯಲ್ಲಿ ಇತಂಹ ಅವ್ಯವಹಾರಗಳು ನಡೆಯಬಾರದು, ಇವತ್ತು ಇಲ್ಲಿ ನಡೆದರೆ ಬೇರೆ ಕಡೆಗಳಲ್ಲಿ ಮುನಿಸಿಪಾಲಿಟಿಯಲ್ಲಿ ಬೇರೆ ಕಡೆ ಏನಾದರೂ ಕೆಲಸಗಳು ಆಗುತ್ತದೆಯೇ? ಅದಕ್ಕಾಗಿ ಇವತ್ತು ಆಡಳಿತ ತಮ್ಮ ಹಿಡಿತದಿಂದ ಮೀರಿ ಹೋಗಿದೆ ಎನ್ನುವಂತಹ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಅದಕ್ಕೆ ನಾವೆಲ್ಲರೂ ಕೂಡ ಇವತ್ತಿನ ದಿವಸ ಅದರ ಬಗ್ಗೆ ವಿಶೇಷವಾಗಿ ನಮ್ಮ ಶಿವಕುಮಾರ್‌ರವರು ಬಹಳ ಕಾಲ ಮಾತನಾಡಿದ್ದಾರೆ. He was also an Urban development Minister. ಮತ್ತೇ ಸೋಮಣ್ಣನವರು, ರಾಮಲಿಂಗಾರೆಡ್ಡಿಯವರು, ನಮ್ಮ ರೋಷನ್ ಬೇಗ್‌ರವರು, ದಿನೇಶ್ ಗುಂಡೂರಾವ್‌ರವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ತಾವು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೀರಿ, ವಿಶೇಷವಾಗಿ ಈ ಒಂದು ಖಾತೆ ತಮಗೆ ಇದೆ. ಇವತ್ತು ಯಾವ ತರಹದ ಸಂಶಯ ಬರಲಾರದಂತಹ ರೀತಿಯಲ್ಲಿ ನೋಡಿಕೊಂಡು ಹೋಗುವಂತಹ ಕೆಲಸ ತಮ್ಮದು ಇದೆ. ಇವತ್ತು ನಾವು ವಿರೋಧಪಕ್ಷದಲ್ಲಿದ್ದೇವೆ, ಸುಮ್ಮನೆ ಅಲ್ಲ, ಇವತ್ತು ನಾವು ಇದರ ಬಗ್ಗೆ ತರಾಟೆಗೆ, ತಮ್ಮ ಗಮನಕ್ಕೆ ತಂದ ಮೇಲೆ ಏನೋ ನಡೆಯುತ್ತಿದೆ ಎನ್ನುವಂತಹ ವಿಷಯ ತಮಗೆ ಗೊತ್ತಾಗಿದೆ. ಅದನ್ನು ತರುವಂತಹ ಕೆಲಸ ನಮ್ಮದು ಆಗಿದೆ. ನೀವು ಏನು ನಮಗೆ ಅಭಿನಂದನೆಗಳನ್ನು ಸಲ್ಲಿಸಿದ್ದೀರಿ, ಇವತ್ತು ನೀವು ಅಭಿನಂದನೆಗಳನ್ನು ಸಲ್ಲಿಸುವಂತಹ ರೀತಿಯಲ್ಲಿ ಕಷ್ಟಪಟ್ಟು ಏನು ಅವ್ಯವಹಾರಗಳು ನಡೆಯುತ್ತಿದೆನ್ನುವಂತಹ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದರ ಬಗ್ಗೆ ತಾವು ಬಿಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ತಾವು ಒಂದು ಸದನ ಸಮಿತಿಯನ್ನು ಮಾಡಿ. ಸದನ ಸಮಿತಿಯಲ್ಲಿ ಎಲ್ಲಾ ಶಾಸಕರು ಬೆಂಗಳೂರು ನಗರದ ಶಾಸಕರು ಮತ್ಯಾರು ಕೂಡ ಇವತ್ತು ಅಧಿಕಾರಿಗಳು ಹೋಗುತ್ತೇವೆ, ನೋಡುತ್ತೇವೆ, ಎಷ್ಟರ ಮಟ್ಟಿಗೆ ಕೆಲಸ ಆಗಿದೆ, ತಾವು 135 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರೆಂದು ಹೇಳಿದ್ದೀರಿ. ನೋಡೋಣ. ಅದರಲ್ಲಿ ಇವತ್ತು ಕೇಂದ್ರದ ಹಣ ಇದೆ, ಕೇಂದ್ರ ಸರ್ಕಾರದವರು ಹಣ ಕೊಡುವಂತಹ ರೀತಿಯಲ್ಲಿ ಇವತ್ತು ಏನು ಜೈಪಾಲ್ ರೆಡ್ಡಿಯವರು ಮಾಡಿದರು? ಮೊನ್ನೆ ಕೂಡ ಮಾನ್ಯ ಪ್ರಧಾನ ಮಂತ್ರಿಗಳು ಬಂದಾಗ ಇದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಬೇಕೆಂದು ತಮ್ಮನ್ನು ಕೇಳಿಕೊಂಡಿದ್ದಾರೆ.

ಅದಕ್ಕಾಗಿ ಇವತ್ತು ಸದನ ಸಮಿತಿಯಾಗಲಿ, ಜನರಿಗೆ ಇದರ ಬಗ್ಗೆ ಗೊತ್ತಾಗಲಿ, ನಿಜವಾದ ರೀತಿಯಲ್ಲಿ ಕೆಲಸವನ್ನು ಮಾಡಿದ್ದರೆ ನಾವು ಶಹಭಾಷ್‌ಗಿರಿಯನ್ನು ಕೊಡುತ್ತೇವೆ. ಅಧಿಕಾರಿಗಳು ನಮಗೆ ಬೇಕಾಗಿಲ್ಲ. ಪಾಪ ಅವರ ಮೇಲೆ ನಮಗೆ ಏನು ಇದೆ? ಆದರೆ ಇವತ್ತು ಸಂಶಯ ಬರುವಂತಹ ರೀತಿಯಲ್ಲಿ ಇವತ್ತು ಕೇಂದ್ರದ ಹಣ ಇದ್ದರೆ ಅದರ ಮೇಲೆ ಸಿಬಿಐ enquiry ಆಗಲಿ, ಅಥವಾ ಸದನ ಸಮಿತಿಯಾಗಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ನನಗೆ ಬಹಳ ಸಂತೋಷವಾಯಿತು. Chief Minister ರವರು ಇಲ್ಲಿ ಅವ್ಯವಹಾರ ಆಗಿದೆ, ನಮ್ಮ ಅಧಿಕಾರಿಗಳಿಂದ ತಪ್ಪು ಆಗಿದೆ ಎಂದು ಹೇಳಿ ಲೆಕ್ಕ ಹಾಕುವಾಗ ನಾಲ್ಕು ಕೋಟಿ ರೂಪಾಯಿಗಳನ್ನು ಕಡಿಮೆ ಕೊಡಿ ಎಂದು ಚಿಂತನೆಗೆ ಬಂದಿದ್ದಾರೆ, ತೀರ್ಮಾನವಾಗಿದೆ ಅಂದರೆ ಮೇಲ್ನೋಟಕ್ಕೆ ಅವರಿಗೆ ಇದರಲ್ಲಿ ಏನು ಒಂದು ಗರ್ಭದ ಗುಡಿಯಲ್ಲಿ ತಪ್ಪಾಗಿದೆ ಎಂದು ಅರ್ಥವಾಗಿದೆ. ನಾವು ಅದನ್ನು ಈಗಾಗಲೇ ಲೋಕಾಯುಕ್ತ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನನ್ನ ಎಂಎಯ ಬಗ್ಗೆಯೂ ಕೂಡ ತಾವು ಮಾತನಾಡಿದ್ದೀರಿ. ನನ್ನದು ಒಂದು life desire ಇತ್ತು. ನಾನು graduate ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. final degree student ಆಗಿದ್ದಾಗ ನಿಮ್ಮ ತಂದೆಯವರ ಮೇಲೆ ನನಗೆ ಕಾಂಗ್ರೆಸ್ ಪಾರ್ಟಿಯಿಂದ ಟಿಕೇಟನ್ನು ಕೊಟ್ಟಿದ್ದರು. ಆಗ ನಾನು ಚುನಾವಣೆಯಲ್ಲಿ ಸೋತುಬಿಟ್ಟೆ. ಆದಾದ ಮೇಲೆ ರಾಜಕಾರಣದ ಆಸೆಗೆ ಬಿದ್ದು graduate ಆಗಲಿಲ್ಲ. ಈಗ ಸುಮ್ಮನೆ ಮಕ್ಕಳಿಗೆ ಹೆದರಿಕೊಂಡು ವಿಧಿಯಿಲ್ಲದೆ graduate ಆದೆ. ಈಗ ತಾವು ನಾನು ಎಂ.ಎ. ಮಾಡಿದೆ. ತಾವು Doctorate ಮಾಡಿ ಎಂದು ಹೇಳುತ್ತಿದ್ದೀರಿ, ನಾನು ಒಂದು ಪ್ರಯತ್ನವನ್ನು ಮಾಡಿ ನೋಡುತ್ತೇನೆ. ತಮ್ಮ ಆಸೆಯಂತೆ ಆ ರೀತಿಯಾಗಿ ಪ್ರಯತ್ನವನ್ನು ಮಾಡೋಣ. ನೋಡಿ ಯಾವುದಾದರೂ ಒಂದು subject ತೆಗೆದುಕೊಂಡು ಪ್ರಯತ್ನವನ್ನು ಮಾಡೋಣ. ಆಗದೇ ಹೋದರೂ ಏನೂ ಇಲ್ಲ. ಏನು ಬೇಕಾದರೂ ಕೂಡ ಒಂದು ಪ್ರಯತ್ನವನ್ನು ಮಾಡೋಣ.

ಒಬ್ಬ ಮಾನ್ಯ ಸದಸ್ಯರು: ತಾವು ಗಣಿಯ ಬಗ್ಗೆ ಮಾಡಿ ಸಾರ್.

ಶ್ರೀ. ಡಿ.ಕೆ. ಶಿವಕುಮಾರ್: ತಾವು ಸಲಹೆಯನ್ನು ಕೊಟ್ಟಿದ್ದೀರಿ, ಗಣಿಯ ಬಗ್ಗೆಯೂ ಕೂಡ ಮಾಡೋಣ, ತಮ್ಮ ಸಲಹೆಯನ್ನು ಲೆಕ್ಕಕ್ಕೆ ಇಟ್ಟುಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು: ಪ್ರತಿಯೊಂದಕ್ಕೂ ಕೂಡ ಡಾಕ್ಟರೇಟ್ ಕೊಡಬೇಕಾಗುತ್ತದೆ. ನೀವೇ ಹೇಳಿಬಿಟ್ಟರೆ ನಮಗೆ ಸಮಾಧಾನವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ನಾನು ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 252 ಕಿ.ಮಿ.ಹೂಳು ತೆಗೆಯುವುದು ಎಂದು ನಿಗದಿಯಾಗಿದೆ. ಇದಕ್ಕೆ 643 ಕೋಟಿ ರೂಪಾಯಿಗಳು ಬರೀ ಹೂಳು ತೆಗೆಯುವುದಕ್ಕೆ ಎಂದು ನಾನು ಹೇಳಲಿಲ್ಲ. ಇದನ್ನು ವಿವಿಧ ಕಾಮಗಾರಿಗಳು ತೆಗೆದುಕೊಂಡಿದ್ದೇವೆ. ಒಟ್ಟಾರೆ ಇದು ಒಂದು ಪ್ಯಾಕೇಜ್ ಆಗಿದೆ. ನಾವು ಇದನ್ನು ವಿವಿಧ ರೀತಿಯಲ್ಲಿ ತೆಗೆದುಕೊಂಡಿದೆ. ಇಲ್ಲಿ ತಾವು ಶಾಸಕರಾದ ಶ್ರೀನಿವಾಸ್‌ರವರಿಗೆ ಒಂದು ಉತ್ತರವನ್ನು ಕೊಟ್ಟಿದ್ದೀರಿ, What is the quantity of slit which has been taken out so far? ಎಂದು ಹೇಳಿ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ತಾವು ಹೇಳಿದ್ದೀರಿ. 14,52,480 ಕ್ಯೂಬಿಕ್ ಮೀಟರ್ಸ್ ಎಂದು ಕೊಟ್ಟಿದ್ದೀರಿ. ಬಹಳ ಸಂತೋಷ. ತಮಗೂ ಲಾರಿಗಳಲ್ಲಿ ಕಳುಹಿಸುವುದು ಮಾಡುವುದು ಇದರ ಬಗ್ಗೆ ತಮಗೆ ಅನುಭವ ಇದೆಯೋ ಏನೋ ಗೊತ್ತಿಲ್ಲ. ನನಗೆ ಸ್ವಲ್ಪ ಸಣ್ಣಪುಟ್ಟ ಅನುಭವವಿದೆ, ಒಂದು ಸಾರಿ ಒಂದು ಲಾರಿಯಲ್ಲಿ ಸಿಲ್ಟ್ ಅಥವಾ ಮಣ್ಣನ್ನು ಹಾಕಬೇಕಾದರೆ ನಾವೆಲ್ಲರೂ ಕಲ್ಲನ್ನು ಕಳುಹಿಸುತ್ತೇವೆ. Maximum ಅಂದರೆ 10 ಟನ್ ಕಲ್ಲನ್ನು ಕಳುಹಿಸಬಹುದು. ಬಹುಶಃ ಈ ಮಣ್ಣನ್ನು ಅದು ಗಣಿಗಳು ಆಗಬಹುದು. ಅವು ನಮ್ಮ ಲಾರಿಗಳು, ಇದನ್ನು ಸಾಮಾನ್ಯವಾಗಿ ಟಿಪ್ಪರ್‌ನಲ್ಲಿ ಅರ್ಧ ಈ ಕಡೆಗೆ, 5 ಟನ್ ಕಳುಹಿಸಬಹುದು. ಇಲ್ಲಾ 6 ಟನ್ ಕಳುಹಿಸಬಹುದು. 6 ಟನ್ ಕಳುಹಿಸಿದರೆ 3,90,000 ಲೋಡ್ ಹೊರಗಡೆಗೆ ಹಾಕಬೇಕು. ಅದು ಏನು ಮೈಸೂರು ರೋಡ್‌ನಿಂದ 15 ಕಿ.ಮಿ. ಇನ್ನೊಂದು ಕಡೆ ಯೂನಿವರ್ಸಿಟಿ ಯಾರ್ಡ್ ಒಳಗಡೆ ಹಾಕಿದ್ದೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ರೈಲ್ವೆ ಯಾರ್ಡ್ ಎಂದು ಹೇಳುತ್ತಾರೆ. ಅಂದರೆ ರೈಲ್ವೆ ಯಾರ್ಡ್‌ನಲ್ಲಿ ಹಾಕಬೇಕಾದರೆ ಒಂದು permission ಬೇಕು. ತಮ್ಮ ಇಲಾಖೆಯ ಅಧಿಕಾರಿಗಳು, ಇಲ್ಲಾ Deputy Commissioner ಆಗಲಿ, ಇಲ್ಲಾ ನಿಮ್ಮ Corporation Commissioner ಆಗಲಿ, ಯೂನಿವರ್ಸಿಟಿಯವರಿಂದ ಇವರು permission ತೆಗೆದುಕೊಂಡಿದ್ದಾರಾ? ಇದರ ಬಗ್ಗೆ notification ಆಗಿದೆಯಾ, ಹೀಗೆ ಹಲವಾರು ವಿಚಾರಗಳನ್ನು ನೋಡಬೇಕಾಗುತ್ತದೆ. ಇದು ಸಾಧ್ಯವೇ? 3,90,000 ಲೋಡ್‌ನ್ನು ಈ ದಿನಾಂಕಗಳಲ್ಲಿ ಶಿಫ್ಟ್ ಮಾಡುವುದಕ್ಕೆ ಸಾಧ್ಯವೇ ಎಂದು ತಾವು ಇದನ್ನು ಊಹಿಸಿ ಇದರ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದರೆ ಸಾಕು. ಇನ್ನೊಂದು ನಾನು ಮುಖ್ಯವಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದನ್ನು ಅನೇಕ ಸಂದರ್ಭದಲ್ಲಿ 2003ರಲ್ಲಿ ಆಯಿತು. 64%, ಇಲ್ಲಾ ಅವತ್ತು ಜಾಸ್ತಿ ಇತ್ತು, ಇವತ್ತು ಕಡಿಮೆ ಇತ್ತು ಎನ್ನುವುದರ ಬಗ್ಗೆ ಒಂದು

ಕಡೆ ವಾದವನ್ನು ಮಾಡಿದರೂ ಕೂಡ, ಬಿಲ್ ಕೊಡುವಂತಹ ಸಂದರ್ಭದಲ್ಲಿ ತಮ್ಮ ಅಧಿಕಾರಿಗಳು, ಒಂದು example ಹೇಳುತ್ತೇನೆ. ಚಲ್ಲಘಟ್ಟ estimated amount ಎಷ್ಟು? ರೇಟ್ 55 ರೂಪಾಯಿ, ಅವನು quoted ಎಷ್ಟು? 55 ರೂಪಾಯಿ, ಅವನು ತೀರ್ಮಾನ ಮಾಡಿ agreement ಮಾಡಿರುವುದು ಎಷ್ಟೆಂದರೆ 125 ರೂಪಾಯಿಗಳಿಗೆ. ಅಂದರೆ 227% extra. ಇನ್ನೊಂದು ಕಡೆ black filling with available 25 ರೂಪಾಯಿ ರೇಟ್. ಅವನು 34 ರೂಪಾಯಿಗೆ ಕೋಟ್ ಮಾಡುತ್ತಾನೆ. ಅವನಿಗೆ 90 ರೂಪಾಯಿಗೆ agreement ಮಾಡುತ್ತಾರೆ. ಹೀಗೆ 1000% ಕೆಲವು ಕಡೆ 1500% ಅಷ್ಟು ಇವತ್ತು increase ಆಗಿದೆ. ಇನ್ನೊಂದು ಕಡೆ ತಾವು ನೋಡಿ. ಒಂದು ಕಡೆ estimate rate 41 ರೂಪಾಯಿ, ಇನ್ನೊಂದು ಕಡೆ ಅವನು 68 ರೂಪಾಯಿಗೆ ಕೋಟ್ ಮಾಡುತ್ತಾನೆ. ಅವನಗೆ ಪುನಃ 210 ರೂಪಾಯಿಗಳಿಗೆ agreement ಮಾಡುತ್ತಾರೆ. ಅವನು ಕೋಟ್ ಮಾಡುವುದಕ್ಕಿಂತ 405% ನಷ್ಟು ಜಾಸ್ತಿ ಮಾಡಿಕೊಡುತ್ತಾರೆಂದರೆ, ಇಲ್ಲಿ ಭ್ರಷ್ಟಾಚಾರ ನಡೆದಿದೆಯಾ, ಇಲ್ಲವಾ, ಇದರಲ್ಲಿ ಅಧಿಕಾರಿಗಳು ಸೇರಿದ್ದಾರಾ ಇಲ್ಲವಾ, ಏಕೆಂದರೆ ಇಲ್ಲಿ agreement ಮಾಡಿರುವುದು ಮುಖ್ಯ. ಏನು ತಾವು ಆ ಸ್ಥಾನದಲ್ಲಿದ್ದೀರಿ, ಈಗ ಮುಖ್ಯಮಂತ್ರಿ ನಾವು ಬೇಕಾದಷ್ಟು ಆರೋಪ ಮಾಡುತ್ತೇವೆ, ತಾವು ಮುಖ್ಯಮಂತ್ರಿಯಾಗಿರುವುದಕ್ಕಾಗಿ ನಾವು ಆರೋಪವನ್ನು ಮಾಡುತ್ತೇವೆ. ಇಲ್ಲಿ ಕುಳಿತುಕೊಂಡರೆ ನಾವು ಆರೋಪವನ್ನು ಮಾಡುತ್ತಾರಾ? ಇನ್ನೊಂದು ಕಡೆಯಲ್ಲಿ ಕುಳಿತುಕೊಂಡರೆ ಆರೋಪವನ್ನು ಮಾಡುತ್ತಾರೆಯೇ? ಯಾವ ಯಾವ ತರಹದ ಸ್ಥಾನದಲ್ಲಿರುತ್ತಾರೆ, ಆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಇಲ್ಲಿ ಒಂದೇ ಆಧಿಕಾರವೆನ್ನುವಂತಹ ಪ್ರಶ್ನೆಯಲ್ಲ. ಇಲ್ಲಿ ನಾನು ಏನು ಮಾತನಾಡಿದ್ದೇನೆ. ನಾನು ಕೂಡ ಪ್ರಯತ್ನ ಮಾಡಿದ್ದೇನೆ. ನಾನು ಅಧ್ಯಯನ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದರ ಬಗ್ಗೆ ನನಗೂ ಕೂಡ ಗೊತ್ತಿದೆ. ತಾವು ನನ್ನನ್ನೂ ಬಾಕ್ಸ್‌ಗೆ ಹಾಕುತ್ತೀರಿ, ನೇರವಾಗಿ ನನ್ನ ಮೇಲೆ ಆರೋಪವನ್ನು ಮಾಡುತ್ತೀರಿ. ಇದು ನಮ್ಮ ಕಾಲದಿಂದ ಬಂದಿರುವುದು, ನಿಮ್ಮದೇ ಕಾರ್ಪೋರೇಟರ್‌ಗಳು, ನಿಜ ನಾನು ಹೇಳುವುದು, ನಾನೇ ಮಾಡಿರಬಹುದು, ನಮ್ಮದೇ ಕಾರ್ಪೋರೇಟರ್ ಮಾಡಿರಬಹುದು. ಧರ್ಮಸಿಂಗ್ ಸಾಹೇಬರೆ ಮಾಡಿರಬಹುದು, ಎಸ್.ಎಂ.ಕೃಷ್ಣ ಮಾಡಿರಬಹುದು, ತನಖೆಯನ್ನು ಮಾಡಿಸಿ. ನೀವು ಸಿಬಿಐಗೆ ಹಾಕಿಸಿ. ಎಲ್ಲರೂ ಕೂಡ ಶಿಕ್ಷೆಗೆ ಒಳಗಾಗೋಣ. ಅವರು ತಾಳ್ಮೆಯಿಂದ ದೇವರು ಕುಳಿತ ಹಾಗೆ ಕುಳಿತಿದ್ದಾರೆ. ತಮಗೆ ಏತಕ್ಕಾಗಿ ಈ ಕಷ್ಟ?

ಶ್ರೀ ಎಂ.ಪಿ.ವೆಂಕಟೇಶ್: ಸಿಬಿಐ, ಸಿಬಿಐ ಎಂದು ಕೇಳಿ ಕಿವಿಯೇ ಹೋಗಿ ಬಿಟ್ಟಿದೆ.

ಶ್ರೀ ಡಿ.ಕೆ.ಶಿವಕುಮಾರ್: ಬಿಡಪ್ಪಾ, ಅದಕ್ಕೇನು ಉತ್ತರ ಹೇಳಬೇಕು ನಮ್ಮ ನಾಯಕರು ಹೇಳಿದ್ದಾರೆ.

ಡಾ॥ ಕೆ.ಅನ್ನದಾನಿ ದೇವರು ಗುಡಿಯಲ್ಲಿ ಸುಮ್ಮನೆ ಕುಳಿತಿರುತ್ತಾನೆ, ಪೂಜಾರಿ ತಾನೇ ಗಲಾಟೆಯನ್ನು ಮಾಡುವುದು.

ಶ್ರೀ ಡಿ,ಕೆ,ಶಿವಕುಮಾರ್: ಆದ್ದರಿಂದ ಇದು ಇಷ್ಟು ಆಳವಾಗಿದೆ. ಇದನ್ನು ಎಲ್ಲಿಗೆ ಹಾಕಬೇಕು. ಕಾನೂನು ಪ್ರಕಾರ ಹಾಕಬೇಕು ಮುಖ್ಯಮಂತ್ರಿಗಳೇ, ನಾನು ಅಧ್ಯಕ್ಷರ ಮುಖಾಂತರ ತಮ್ಮನ್ನು ಇದನ್ನು ಎಲ್ಲಿಗೆ ಹಾಕಬೇಕೆಂದು ಕೇಳುತ್ತೇನೆ. ಈಗ ನಮ್ಮ ಜಿಲ್ಲೆಯಲ್ಲಿ ಹಾಕಲಿ. ಕೆಲವು ಕಡೆ 15ಕಿ.ಮಿ ಎಂದು ತೋರಿಸಿದ್ದಾರೆ. ಸಿಟಿಯಲ್ಲಿ ಬೇಕಾದರೆ ಹಾಕಲಿ. ಈ ಬಗ್ಗೆ notification ಆಗಬೇಕು. ಈ Agreement ಪ್ರಕಾರ ವೀಡಿಯೋ ನಡೆದಿರಬೇಕು. ಏನು ಜೈರಾಜ್‌ರವರು ಸಹಿ ಹಾಕಿದ್ದಾರಲ್ಲಾ ಅದರ ಪ್ರಕಾರ ವಿಡಿಯೋ, ಫೋಟೋಗ್ರಾಫ್, complete ಆಗಿ ಎಲ್ಲವೂ ಆಗಬೇಕೆಂದು ಇದರಲ್ಲಿ ಇದೆ. ಅದನ್ನು ನಾನು ಜಾಸ್ತಿ ಹೊತ್ತು ಓದುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇದು clarification. ಏನೂ ನಡೆದಿಲ್ಲ. ಎಲ್ಲೂ ಕೂಡ notification ಆಗಿರುವುದಿಲ್ಲ. ನಾನು ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ರೈಲ್ವೆ ಯಾರ್ಡ್‌ನಲ್ಲೂ ಹಾಕಿಲ್ಲ, ರಾಜರಾಜೇಶ್ವರಿ ನಗರದಲ್ಲೂ ಕೂಡ ಹಾಕಿಲ್ಲ, ಶೀಗೆಹಳ್ಳಿಯಲ್ಲೂ ಹಾಕಿಲ್ಲ, ಶೆಟ್ಟಿಹಳ್ಳಿಯಲ್ಲೂ ಕೂಡ ಹಾಕಿರುವುದಿಲ್ಲ. ನಾನು ಎಲ್ಲಾ ಕಡೆ ಹೋಗಿ ತಿರುಗಿ ಬಂದಿದ್ದೇನೆ, ಅಲ್ಲಿಗೆ 3–4 ಜನರು ಹೋಗಿ ನೋಡಿಕೊಂಡು ಸಹ ಬಂದಿದ್ದಾರೆ. ಹೀಗೆ ನಡೆಯದೆ ಇರುವಂತಹದ್ದು, ಎಲ್ಲೂ ಕೂಡ ಕೇಳದೆ ಇರುವಂತಹದ್ದು, ಮಲಮೂತ್ರವನ್ನು, ಇದನ್ನು ಹಗರಣವೆಂದು ಹೇಳುವುದಿಲ್ಲ, ಇದು ನುಂಗಿಬಿಟ್ಟಿರುವಂತಹ ವಿಚಾರವಾಗಿದೆ. ತಾವು ಅಷ್ಟು world bank ನಿಂದ ಕರೆದುಕೊಂಡು ಬಂದಿದ್ದಿರಲ್ಲಾ, ನಾವೆಲ್ಲಾ ಬಹಳ ದೊಡ್ಡವರು ಎಂದು ಅಕ್ಕಪಕ್ಕ ನಾವು ಕೂಡ ಇಟ್ಟುಕೊಂಡಿದ್ದೆವು. ಅಂತಹವುದನ್ನು ರಾತ್ರೋರಾತ್ರಿಯಲ್ಲಿ ತೆಗೆಯಬೇಕಾದರೆ ಏನೆಂದು ತಮಗೆ ಗೊತ್ತಿತ್ತಲ್ಲಾ, ಏನೋ ಆಗಿದೆ ಎಂದು ಹೇಳಿ. 3 ಜನ ಅಧಿಕಾರಿಗಳನ್ನು ಮಾನ್ಯ ರೇವಣ್ಣನವರು ಕೂಡ ಶಿಫ್ಟ್ ಮಾಡಿಬಿಟ್ಟರು. ಅವರು ಪ್ರಾಮಾಣಿಕರು ಆಗಿದ್ದರೆ ಏತಕ್ಕಾಗಿ ಶಿಫ್ಟ್ ಮಾಡಿದರು? ಏನೂ ಹೆಚ್ಚು ಕಡಿಮೆ ಆಗಿದೆ ಎಂಬ ದೃಷ್ಟಿಯಿಂದ ತಾವು ತಮಗೆ ಗೊತ್ತಾದ ತಕ್ಷಣ ಕ್ರಮಗಳನ್ನು

ಕೈಗೊಂಡಿದ್ದೀರಿ, ಇದು ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ. ಪ್ರಧಾನಮಂತ್ರಿಗಳು ಹೆಚ್ಚು ಇದಕ್ಕೆ ಹೆಚ್ಚು ಒತ್ತು ಕೊಟ್ಟು ಹಣವನ್ನು ಕೊಡುವ ಬಗ್ಗೆ ಹಾಗೂ ಬೆಂಗಳೂರಿನ ಬಗ್ಗೆ ಬೆಂಗಳೂರು ಒಂದು ದೊಡ್ಡ ಐತಿಹಾಸಿಕ ನಗರವಾಗಿದೆ. ಇದರಿಂದ ಹೆಚ್ಚಿಗೆ ಉತ್ಪತ್ತಿಯಾಗಬೇಕು. ಅದನ್ನು ಮಾಡ್ರನ್ ಮಾಡಬೇಕು, ಸಮಸ್ಯೆಗಳು ಬಗೆಹರಿಯಬೇಕೆಂದು ಹೇಳಿ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಪಾರದರ್ಶಕತೆ ಇರಬೇಕು. ತಮಗೂ ಕೂಡ ಅನೇಕ ಸಂದರ್ಭದಲ್ಲಿ ಜೈಪಾಲ್‌ರೆಡ್ಡಿಯವರು ಮಾತನಾಡಿದಾಗ ಹೇಳಿದ್ದೇನೆ. ತಮ್ಮ ಬಗ್ಗೆ ಅಪಾರವಾದಂತಹ ವಿಶ್ವಾಸವಿದೆ. ಎಷ್ಟು ವಿಶ್ವಾಸವಿದೆ ಎಂದು ನನಗೆ ಗೊತ್ತಿದ್ದರೆ ಈ ಬಗ್ಗೆ 3–4 ಸಲ ಹೇಳಿದ್ದಾರೆ. ತಾವು ಭೇಟಿ ಮಾಡಿದಾಗ, ತಾವು ಮತ್ತು ಜೆ.ಹೆಚ್.ಪಟೇಲ್‌ರವರ ಮಗ ಹೋದಾಗ ಏನು ಮಾತನಾಡಿದ್ದೀರಿ, ತಾವು ಏನು ಮಾತನ್ನು ಕೊಟ್ಟಿದ್ದೀರಿ, ಎನ್ನುವುದರ ಬಗ್ಗೆ ನಮ್ಮ ಹತ್ತಿರ ಚರ್ಚೆ ಮಾಡಿದ್ದಾರೆ. ತಮ್ಮ ಬಗ್ಗೆ ಒಂದು ನಂಬಿಕೆ ಇದೆ. ತಾವು ಏನೂ ಹೇಳಿದರೂ ಕೂಡ ಒಪ್ಪಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ವಿಶ್ವಾಸವಿದೆ. ಅವರ ವಿಶ್ವಾಸಕ್ಕೆ ಧಕ್ಕೆ ಬರಬಾರದು. ಇನ್ನು ಹೆಚ್ಚಿಗೆ ಹಣವನ್ನು ಕೊಡುತ್ತಾರೆ. ಇದಕ್ಕೆ ತಾವು ದಯವಿಟ್ಟು ತಾವು ಮಾಡಿದ್ದೀರಿ ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ನಿಮ್ಮ ಹೆಸರಿನಲ್ಲಿ collection ಆಗಿದೆ ಎಂದು ನಾನು ಬಯಸುತ್ತೇನೆ. ಏಕೆಂದರೆ ಅನೇಕ ಸ್ನೇಹಿತರುಗಳು ನಮ್ಮ ಹತ್ತಿರ ವಿಚಾರಗಳನ್ನು ತಿಳಿಸಿದ್ದಾರೆ. ಅವರು ಸುಳ್ಳು ಹೇಳಿರಬಹುದು, ಆದ್ದರಿಂದ ತನಿಖೆ ಮಾಡುವುದರಿಂದ ಇದು ಈಚೆಗೆ ಬರಬೇಕು. ಅಗ್ನಿ ಪರೀಕ್ಷೆಯಿಂದ ಈಚೆಗೆ ಬರಬೇಕು. ಆ ಉತ್ತಮವಾದ ಅಧಿಕಾರಿಗಳು ಮಾಡಲಿಲ್ಲವೆಂದರೆ ಇನ್ನೊಂದು promotion ಕೊಟ್ಟು Chief Secretary ಮಾಡಿ. Chief Secretary ಮಾಡಿದ ಮೇಲೆ ನಾವು ಪಾರ್ಲಿಮೆಂಟಿಗೋ, ಅಸೆಂಬ್ಲಿಗೋ ಟಿಕೆಟ್ ಕೊಡುತ್ತೇವೆ. 3–4 ಜನ Chief Secretary ಯವರಿಗೆ ಕೊಟ್ಟಿದ್ದೇವೆ. ಹಾಗೆ ಅವರಿಗೂ ಅಸೆಂಬ್ಲಿಗೋ, ಇಲ್ಲಾ ಬೆಂಗಳೂರು ಸೌತ್‌ಗೊ, ಎಲ್ಲೋ ಒಂದು ಕಡೆ ಮಾಡೋಣ. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದರೆ ಮಾಡೋಣ. ಆದರೆ ಕೆಲಸ ಮಾಡಿಲ್ಲವೆಂದರೆ ಇಂತಹವರು ಶಿಕ್ಷೆಗೆ ಬಲಿಯಾಗಲಿಲ್ಲವೆಂದರೆ ತಾವು ಪ್ರತಿ ಸಂದರ್ಭದಲ್ಲಿಯೂ ಕೂಡ ಹೇಳಿದ್ದೀರಿ. ನನಗೆ ಯಾರು ಸಹಾಯ ಮಾಡಿಲ್ಲ, ನನಗೆ ಯಾರು ಕೆಟ್ಟ ಹೆಸರು ತಂದಿದ್ದಾರೆ ಅವರನ್ನು ಸಸ್ಪೆಂಡ್ ಮಾಡುತ್ತೇನೆಂದು ಹೇಳಿದ್ದೀರಿ. ಇಲ್ಲಿಯವರೆಗೂ ಕೂಡ ನೀವು ಒಬ್ಬರಿಗೂ ಏನು ಮಾಡುವುದಕ್ಕಾಗಲಿಲ್ಲ. ದಯವಿಟ್ಟು ಇದನ್ನಾದರೂ ಮಾಡಿ ಎಂದು ಹೇಳುತ್ತೇನೆ. ಲಕ್ಷಾಂತರ ಜನ

ಮಲಮೂತ್ರ ವಿಸರ್ಜನೆ ಮಾಡಿರುವುದನ್ನೇ ತಿಂದಿರುವಂತಹ ವ್ಯಕ್ತಿಗಳನ್ನು ನೀವು ಬಲಿ ಹಾಕಲಿಲ್ಲವೆಂದರೆ ಇನ್ಯಾರು ಮಾಡುವುದಕ್ಕಾಗುತ್ತದೆ? ನನ್ನ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರಲ್ಲಾ, ನನ್ನ ಕುಟುಂಬದ ಮೇಲೆ ಹಾಕಿದ್ದೀರಲ್ಲಾ, ಆ ರೀತಿಯಾಗಿ ಹಾಕಿ. ಇದನ್ನು ಯಾರು ಬೇಡವೆಂದು ಹೇಳುತ್ತಾರೆ? ಅವರು ಅಗ್ನಿಪರೀಕ್ಷೆಯಿಂದ ಈಚೆಗೆ ಬರಲಿ, ದಯವಿಟ್ಟು ತಮಗೆ ಆ ಶಕ್ತಿ ಇದೆ. ಇನ್ನು 2–3 ತಿಂಗಳು ಕಾಲ ತಾವು ಇರುತ್ತೀರಿ. ಇನ್ನು ಹೆಚ್ಚಿಗೆ ಇರಿ, ಇಂತಹವನ್ನು ಬಲಿಹಾಕುವುದರ ಮೂಲಕ ತಾವು ಒಳ್ಳೆಯ ಹೆಸರನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡಬೇಕು. ಇದನ್ನು ತಾವು ಸಿಬಿಐಗೆ ವಹಿಸಬೇಕೆಂದು ನನ್ನ ಮನವಿ.

ಶ್ರೀ ಕೆ. ಚಂದ್ರಶೇಖರ್ (ಬಸವನಗುಡಿ): ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಪ್ರಮುಖವಾಗಿ ಎರಡು ವಿಷಯಗಳು ಇವೆ. ಮಾನ್ಯ ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ನಾನು ಚರ್ಚೆ ಮಾಡುವುದಕ್ಕೆ ಬಯಸಿದಂತಹ ವಿಷಯ ಇಲ್ಲಿ ಬಂದಿರುವಂತಹ compliant ಮತ್ತು ನಿರ್ಣಯಗಳು. ಇದಕ್ಕೆ ಸಂಬಂಧಪಟ್ಟಂತಹ ವಿಷಯಗಳ ಬಗ್ಗೆ. ಬೆಂಗಳೂರು ಮಹಾನಗರ ಪಾಲಿಕೆ KMC Act ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆ ಕೌನ್ಸಿಲ್‌ಗೆ ಟೆಂಡರ್ ಕರೆಯುವುದಕ್ಕಾಗಲಿ, administration approval ಕೊಡುವುದಕ್ಕಾಗಲಿ, ಕೇವಲ 1 ಕೋಟಿ ರೂಪಾಯಿಗಳಿಗೆ ಮಾತ್ರ ವ್ಯಾಪ್ತಿಯ ಅಧಿಕಾರವಿರುತ್ತದೆ. ಆ ವ್ಯಾಪ್ತಿಯ ಅಧಿಕಾರವನ್ನು ಮೇರೆ ಮೀರಿದಂತಹ ಅಧಿಕಾರ ಬೆಂಗಳೂರು ಮಹಾನಗರ ಪಾಲಿಕೆಗೆ ಇಲ್ಲ. ಎರಡನೆಯದಾಗಿ, ಬೆಂಗಳೂರು ಮಹಾನಗರ ಪಾಲಿಕೆಯ Standing Committee ಗಾಗಲಿ, ಬೆಂಗಳೂರು ಮಹಾನಗರ ಪಾಲಿಕೆ ಕೌನ್ಸಿಲ್‌ಗಾಗಲಿ ನಿರ್ಣಯಗಳನ್ನು ಮಂಡನೆ ಮಾಡುವಂತಹ ಅಧಿಕಾರ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಸಂಬಂಧಪಟ್ಟಿರುತ್ತದೆ. ಹಾಗಾಗಿ ಯಾವುದೇ ನಿರ್ಣಯಗಳು ಅಲ್ಲಿಗೆ ಬಂದರೆ ಅದು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ನಿರ್ಣಯವಾಗುತ್ತದೆ. ಆ ನಿರ್ಣಯ ಒಂದು. ಇಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯವರು ತೆಗೆದುಕೊಂಡಂತಹ ನಿರ್ಣಯಗಳ ಬಗ್ಗೆ ಚರ್ಚೆಯಾಗಲಿ, compliant ಆಗಿ ಬಂದಿಲ್ಲ. ಯಾವುದೇ ನಗರ ಪಾಲಿಕೆ ಸದಸ್ಯರ ಬಗ್ಗೆಯಾಗಲಿ, ಮೇಯರ್ ನಿರ್ಣಯದ ಬಗ್ಗೆಯಾಗಲಿ complaint ಎಲ್ಲಿಯೂ ಮಾಡಿಲ್ಲ, ಆ complaint ಬಗ್ಗೆ ಕೂಡ ಎಲ್ಲಿಯೂ ಚರ್ಚೆಯೂ ಆಗಿಲ್ಲ. ಯಾವುದೇ ಪತ್ರಿಕೆಯಲ್ಲಿಯೂ ವರದಿಯಾಗಿಲ್ಲ. ಇದಾದ ಮೇಲೆ KMC

Act section 327, Section 418, Section 72 ಈ ಎಲ್ಲಾ ಅಧಿಕಾರವನ್ನು ಮುಖ್ಯಮಂತ್ರಿಗಳು ಸ್ವಲ್ಪ ಕೇಳಬೇಕು ಎಂದು ನನ್ನ ಮನವಿ. ಈ ಒಂದು ಅಧಿಕಾರ ವ್ಯಾಪ್ತಿ ಆಯುಕ್ತರಿಗೆ ಸಂಬಂಧಪಟ್ಟಿದ್ದು. ಯಾವುದೇ ಆಯುಕ್ತರಿರಲಿ, ನಾನು ಇಂಥ ಆಯುಕ್ತರ ಬಗ್ಗೆ ಎಂದು ಮಾತನಾಡುವುದಿಲ್ಲ. ನಿರ್ಣಯ ಆದಮೇಲೆ ಆ ನಿರ್ಣಯಗಳು ಸರ್ಕಾರಕ್ಕೆ ಬರುತ್ತವೆ. ಸರ್ಕಾರ ಆ ನಿರ್ಣಯವನ್ನು ಅನುಮೋದನೆ ಮಾಡುತ್ತದೆ. ಅನುಮೋದನೆ ಮಾಡಿದ ಮೇಲೆ ನಿರ್ಣಯವನ್ನು ಮಾಡುವುದು ಮಾತ್ರ ಮಹಾನಗರ ಪಾಲಿಕೆಯ ಕೌನ್ಸಿಲ್ ಜವಾಬ್ದಾರಿಯಾಗಿರುತ್ತದೆಯೇ ಹೊರತು ನಿರ್ಣಯ ಆದಮೇಲೆ administration ಮಾಡುವುದಾಗಲಿ, ಕೆಲಸವನ್ನು ಮಾಡಿಸುವುಕ್ಕಾಗಲಿ, MB ಕೊಡುವುದಕ್ಕೆ ಆಗಲಿ, ಬಿಲ್ ಕೊಡುವುದಕ್ಕಾಗಲಿ ಬೆಂಗಳೂರು ಮಹಾನಗರ ಪಾಲಿಕೆಯ Standing Commitee ಗಾಗಲಿ, ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್‌ಗಾಗಲೀ ಯಾವ ಅಧಿಕಾರವೂ ಇಲ್ಲ. ಒಂದು ನಿಮಿಷ, ನಾನು ಯಾವತ್ತೂ ಮಾತನಾಡುವುದಿಲ್ಲ.

ಉಪಾಧ್ಯಕ್ಷರು: ನೀವು ಮಾತನಾಡುವುದಿಲ್ಲವೆಂತಲೇ ನಿಮ್ಮನ್ನು ಮೊದಲು ಕರೆದದ್ದು, ಬೇಗನೆ ಮುಗಿಸಿಬಿಡಿ. ನೀವು ಬಹಳ detail ಆಗಿ ವಿವರಿಸಲಿಕ್ಕೆ ಹೋಗಬೇಡಿ. ಇಲ್ಲಿಯವರೆಗೆ ಎಲ್ಲಾ ವಿಷಯಗಳನ್ನು ಡಿ,ಕೆ.ಶಿವಕುಮಾರ್‌ರವರು .ಮಾತನಾಡಿದ್ದಾರೆ.

ಶ್ರೀ ಕೆ.ಚಂದ್ರಶೇಖರ್:- ಮುಖ್ಯಮಂತ್ರಿಗಳ ಗಮನಕ್ಕೆ ತಂದರೆ ಅವರಿಗೆ ವಿಶಾಲ ಮನೋಭಾವದಿಂದ ನಿರ್ಧಾರ ತೆಗೆದುಕೊಳ್ಳಲಿ ಸಾಧ್ಯತೆ ಉಂಟು ಎನ್ನುವ ಭಾವನೆಯಿಂದ ಹೇಳುತ್ತಿದ್ದೇನೆ. ಈ ಬಿಲ್ ಕೊಡುವುದಾಗಲಿ, administration ಆಗಲಿ, ಕೆಲಸದ್ದಾಗಲೀ, ಇದು ಸಂಪೂರ್ಣ ಅಧಿಕಾರಿಗಳದ್ದೇ ಹೊರತು ಯಾವುದೇ ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿ ಅಲ್ಲವೆಂದು KMC Act ಸ್ಪಷ್ಟನೆ ಕೊಟ್ಟಿದೆ. ಹಾಗಾಗಿ ಈ ತಪ್ಪು ಸರಿಗಳು ಯಾವುದೇ ಇದ್ದರೂ ಸಹ ಅದು ಅಧಿಕಾರಿಯ ವ್ಯಾಪ್ತಿಗೆ ಬರುತ್ತದೆಯೇ ಹೊರತು ಅದು ಯಾವುದೇ Standing Committee, ಮಹಾನಗರ ಪಾಲಿಕೆಯ ಕೌನ್ಸಿಲ್‌ಗಾಗಲೀ ಬರುವುದಿಲ್ಲ. ಎರಡನೆಯದಾಗಿ KMC Act ಪ್ರಕಾರ ಈ ಒಂದು ಅಧಿಕಾರ ಆಯುಕ್ತರದೇ. ಅಲ್ಲಿನ ತನ್ನ ಅಧಿಕಾರವನ್ನು ಸಂಬಂಧಪಟ್ಟ ಅಧಿಕಾರಿಗೆ Act ಪ್ರಕಾರ ವರ್ಗಾವಣೆ ಮಾಡಿದ್ದಾರೆ. ಈ ವರ್ಗಾವಣೆ ಮಾಡಿದ ಮೇಲೆ ಈ ಬಿಲ್ಲಿಗೆ finalization ಬರುವುದು ಎಲ್ಲಿ ಗೊತ್ತೇ? ಮತ್ತೆ ಅದು Commissioner ಗೆ

ಬರುತ್ತದೆ. ಯಾವಾಗ ಅದು ಕೋಟ್ಯಾಂತರ ಹಣ ಆಗುತ್ತದೋ ಆ ಬಿಲ್ Junior Engineer, Assistant Executive Engineer, Executive Engineer ಇವರ್‍ಯಾರು ಆ ಕೆಲಸವನ್ನು ಮಾಡಿದ್ದರೂ ಸಹ ಆ ಕೋಟ್ಯಾಂತರ ರೂ.ಗಳ ಬಿಲ್ ಸಿ.ಇ.ಓ.ಗೆ ಬರಬೇಕಾದರೆ ಅದು ಕಮಿಷನರ್‌ರವರ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ ನನ್ನ ಮನವಿ ಏನೆಂದರೆ, ಇದು ಪಾಲಿಕೆಯ ಯಾವುದೇ ನಿರ್ಣಯಗಳಿಗೂ, ಬಿಲ್‌ಗಳಿಗೂ ಒಂದಕ್ಕೊಂದು ಸಂಬಂಧವಿಲ್ಲ. ಪಾಲಿಕೆಯ ಆಯುಕ್ತರು ಬರೆಯುವಂತಹ ಟಿಪ್ಪಣಿಗಳ ಮೇಲೆ ಅವರು ನಿರ್ಣಯಗಳನ್ನು ಮಾಡುತ್ತಾರೆ. ಯಾವುದೇ ಟಿಪ್ಪಣಿಯನ್ನು ನಾವು ಮಂಡನೆ ಮಾಡುವುದಕ್ಕೆ ಯಾವುದೇ Standing Committee ಗಾಗಲಿ, ಯಾವುದೇ ಕೌನ್ಸಿಲ್‌ಗಾಗಲೀ ಯಾವುದೇ ಅಧಿಕಾರ ವ್ಯಾಪ್ತಿ ಇಲ್ಲ. ಆಯುಕ್ತರ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ಟಿಪ್ಪಣಿಯನ್ನು ಮಂಡನೆ ಮಾಡಬೇಕಾಗುತ್ತದೆ. ಬಿಲ್ ಕೊಡುವುದು ಆಯುಕ್ತರ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಹಾಗಾಗಿ ಈ ಎಲ್ಲಾ ವಿಷಯಗಳು ಸಹ ಅಧಿಕಾರಗಳ ವ್ಯಾಪ್ತಿಗೆ ಬರುತ್ತದೆನ್ನುವುದನ್ನು ಮಾತ್ರ ಈ ಸದನದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಉಪಾಧ್ಯಕ್ಷರು: ಬೆಳಿಗ್ಗೆ ಬೇಕಾದಷ್ಟು ಮಾತನಾಡಿದ್ದರೆ, ಹಾಗಾಗಿ ರೋಷನ್ ಬೇಗ್‌ರವರು ಬೇಗನೆ ಮುಗಿಸಿಬಿಡಿ.

ಶ್ರೀ ಆರ್.ರೋಷನ್ ಬೇಗ್(ಜಯಮಹಲ್): ಮಾನ್ಯ ಅಧ್ಯಕ್ಷರೇ, clarification ನಲ್ಲಿ ಮಾನ್ಯ ಶಿವಕುಮಾರ್‌ರವರು, ಚಂದ್ರಶೇಖರ್‌ರವರು ಮಾತನಾಡಿರುವುದನ್ನು ನಾನು ಪುನಃ repeat ಮಾಡಲಿಕ್ಕೆ ಹೋಗುವುದಿಲ್ಲ. ಕೋರಮಂಗಲ, ಚಲಘಟ್ಟ, ಹೆಬ್ಬಾಳ, ವಿಶ್ವಭಾರತಿ ಈ ನಾಲ್ಕು ಪ್ರಾಜೆಕ್ಟ್ಸ್ ಏನವೆ. ನನ್ನ ಕ್ಷೇತ್ರಕ್ಕೆ ಈ ಹೆಬ್ಬಾಳ ವ್ಯಾಲಿ ಪ್ರಾಜೆಕ್ಟ್ ಬರುತ್ತದೆ. ನಾನು ಇದರ ಬಗ್ಗೆ ಖುದ್ದಾಗಿ ಮಾನಿಟರ್ ಮಾಡಿದ್ದೇನೆ. ಯಾವುದೇ ಒಂದು ಕೆಲಸ ಅಲ್ಲಿ ಸರಿಯಾಗಿ ಆಗಿಲ್ಲ. ನಾನು ಮೂರು ನಾಲ್ಕು ಸಾರಿ ಈ Corporation ಅಧಿಕಾರಿಗಳಿಗೆ complaint ಮಾಡಿದರೂ ಕೂಡ ಆ ಪ್ರಾಜೆಕ್ಟ್‌ನಲ್ಲಿ ಸರಿಯಾಗಿ ಕೆಲಸ ಆಗಿಲ್ಲ. ನಾನು ಖುದ್ದಾಗಿ ಮಾನಿಟರ್ ಮಾಡಿದ್ದರೂ ಸಹ ಆ ಪ್ರಾಜೆಕ್ಟ್‌ನಲ್ಲಿ ಸರಿಯಾಗಿ ಕೆಲಸ ಆಗಿಲ್ಲವೆಂದರೆ ಇದರಲ್ಲೇನೋ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಅಧ್ಯಕ್ಷರೇ, ನಾನು Corporation Commissioner ರವರು ಹೀಗೆ ಮಾಡಿದರು ಹಾಗೆ ಮಾಡಿದರು ಎಂದು ಹೇಳುವುದಿಲ್ಲ. ಸನ್ಮಾನ್ಯ ಜೈರಾಜ್ ಅವರು ಒಬ್ಬ competent and a very efficient officer. He must have been missed. ಇದೆಲ್ಲಾ ಮಾಡಿದ್ದು ಮೇಯರ್, ಆಗಿನ Works committee Chairman, Town Planning Committee Chairman, ನಗರಸಭಾ ಸದಸ್ಯರೆಲ್ಲಾ ಇದರಲ್ಲಿ ಶಾಮೀಲಾಗಿದ್ದಾರೆಂದು ಒಂದು ಕಡೆ ಅವರು ಹೇಳುತ್ತಾರೆ. ಮತ್ತೊಂದು ಕಡೆ IAS Officers ಎಂದು ಒಂದು ಕಡೆ ಹೇಳುತ್ತಾರೆ. ಹಾಗಾಗಿ ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿಬಿಡಿ. ಇದರ ಬಗ್ಗೆ investigate ಮಾಡಲಿ. ಇದರಲ್ಲಿ ನಗರಸಭಾ ಸದಸ್ಯರಿದ್ದಾರೆಯೇ, ಅಥವಾ ಆಗಿನ ಮೇಯರ್ ಯಾರಿದ್ದರೋ ಅವರಿದ್ದಾರೆಯೇ, ಅಧಿಕಾರಿಗಳು ಶಾಮೀಲಾಗಿದ್ದಾರೆಯೇ ಎಂಬುದು ಗೊತ್ತಾಗುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಹೆಬ್ಬಾಳ ವ್ಯಾಲಿ ಪ್ರಾಜೆಕ್ಟ್ ಏನು ಕೊಟ್ಟಿದ್ದಾರೆ, ಯಾರ್‍ಯಾರು contractors, CL Infrastructure Project, Madhavan Hitech Enginners Limited. GVPR Engineers Limited, M/s. GV Engineers Pr. Limited. ಈ Projects ನಲ್ಲಿ ಯಾವುದೇ ಕೆಲಸವೂ ಸರಿಯಾಗಿ ನಡೆದಿಲ್ಲ. ಇದರಲ್ಲಿ ಮೋಸ ನಡೆದಿದೆಯೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ):- ಮಾನ್ಯ ಮುಖ್ಯಮಂತ್ರಿಗಳು ವಿವರಣೆಯನ್ನು ಕೊಟ್ಟಿದ್ದಾರೆ, ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳ ಗಮನಕ್ಕೆ ಒಂದೆರಡು ಮೂರು ವಿಚಾರಗಳನ್ನು ತರಬಯಸುತ್ತೇನೆ. ವಿಶೇಷವಾಗಿ 643.00 ಕೋಟಿ ರೂ.ಗಳ ಯೋಜನೆಯನ್ನು ಮಾಡಿದ್ದಾರೆ. ಇದರಲ್ಲಿ ತನ್ನದೇ ಆದಂಥ ನಿರ್ದಿಷ್ಟವಾದಂಥ ಒಂದು ಉದ್ದೇಶವಿತ್ತು. ಈಗಾಗಲೇ ಸುಮಾರು 12 ಉದ್ದೇಶಗಳನ್ನು ಮಹಾನಗರಪಾಲಿಕೆ ಗುರುತಿಸಿದೆ. ಈ 12 ಉದ್ದೇಶಗಳಲ್ಲಿ ಯಾವುದಾದರೂ ಒಂದು ಉದ್ದೇಶವನ್ನು ಈಡೇರಿಸುವುದಕ್ಕೆ ಅವರು ಕಾರ್ಯೋನ್ಮುಖರಾಗಿದ್ದಾರೆಯೇ ದಯಮಾಡಿ ತಿಳಿಸಬೇಕು. ಎರಡನೆಯದಾಗಿ, ಇಂಥ ಯೋಜನೆಗಳು ಕೇಂದ್ರ ಸರ್ಕಾರ, ರಾಜ್ಯಸರ್ಕಾರ, ಸ್ವಾಯತ್ತ ಸ್ಥಳೀಯ ಸಂಸ್ಥೆಗಳು ಮಾಡುವಾಗ ಒಂದು consultancy ಯನ್ನು fix ಮಾಡುತ್ತಾರೆ. ಆ consultancy ಯವರು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆಯೇ? ನಾನು ಮಾತನಾಡುವಾಗ ತಾವಿರಲಿಲ್ಲ. ನಾನು ಹೇಳಿದ್ದೇನೆ. ಶ್ರೀ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಯಾಗಿರಬಹುದು, ಶ್ರೀ ಧರಂಸಿಂಗ್‌ರವರು ಮುಖ್ಯ ಮಂತ್ರಿಯಾಗಿರಬಹುದು ಅಥವಾ ಮತ್ತೊಬ್ಬರಾಗಿರಬಹುದು, ಆದರೆ ಅಧಿಕಾರಿಗಳು ಕೆಲಸ ಮಾಡುವಾಗ ಎಲ್ಲೋ ಒಂದು ಕಡೆ ಇದರಲ್ಲಿ ಶ್ರದ್ಧೆಯಿಂದ ಮನಸ್ಸನ್ನು ಸರಿಯಾಗಿಟ್ಟುಕೊಂಡು ಮಾಡಿಲ್ಲ. ಇದು ಬೃಹತ್ತಾದ ಕೆಲಸ, ಇದರಲ್ಲಿ ತಾಂತ್ರಿಕ ದೋಷಗಳಿವೆ. ಇದರಲ್ಲೇನಾಗಿದೆಯೆಂದರೆ, ಒಂದು consultancy

ಮಾಡಿದ್ದಾರೆ. ಆ consultancy ಯವರು ಇದಕ್ಕೆ ಸರಿಯಾಗಿ ರೂಪುರೇಷೆಯನ್ನು ಕೊಟ್ಟಿದ್ದರೆ ಈ ಒಂದು ಹಗರಣ ಆಗುತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಅವರಿಗೆ ಏನು ಮಾಡಿದ್ದಾರೆ? 12 ಅಂಶಗಳನ್ನು ಮಹಾನಗರ ಪಾಲಿಕೆ ಹಮ್ಮಿಕೊಂಡು ಈ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಇದು ದೋಷಪೂರಿತವಾಗಿದೆಯೆನ್ನುವುದಕ್ಕೆ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ 18.00 ಕೋಟಿ ರೂ.ಗಳನ್ನು ಮಾತ್ರ ಹೂಳು ತೆಗೆಯಲಿಕ್ಕೆ ಕೊಟ್ಟಿದೆ. ಇನ್ನುಳಿದಿರುವ 120.00 ಕೋಟಿ ರೂ.ಗಳನ್ನು ನಾವು ಬೇರೆ ನಾವು ಬೇರೆ ಬೇರೆ ಯೋಜನೆಗಳಿಗೆ ಕೊಟ್ಟಿದ್ದೇವೆಂದು ಹೇಳಿದರು. ನಮಗೆ ಹಾಗೂ ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ಬೆಂಗಳೂರಿನ ಬಗ್ಗೆ ಅಪಾರವಾದ ಗೌರವವಿದೆ. ಏತಕ್ಕೆ ತಾವು ಸದನ ಸಮಿತಿಯನ್ನು ಮಾಡಬೇಕೆಂದರೆ ತಾವು ಹೇಳಿದ್ದೀರಿ, ಚುನಾಯಿತ ಪ್ರತಿನಿಧಿಗಳಿದ್ದರು, Standing Committee ಇತ್ತು ಎಲ್ಲವೂ ಇತ್ತು. ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ಮೇಲೆ ಸುಮಾರು 8–9 ತಿಂಗಳುಗಳಾಗಿವೆ, ಕಾಮಗಾರಿಗಳ ಬಗ್ಗೆ ಚರ್ಚೆ ಮಾಡುವಾಗಲೂ ಕೂಡ ಇದಕ್ಕೇನಾದರೂ ಒಂದು ರೂಪವನ್ನು ಕೊಡಿ ಎಂದು ಹೊಸ ಆಯುಕ್ತರಿಗೆ ಹೇಳಿದ್ದೇವೆ. ಇನ್ನೊಂದು ದಿವಸ ಚರ್ಚೆ ಮಾಡುವುದಾಗಿ ತಿಳಿಸಿದರು. ನರ್ದಿಷ್ಟವಾಗಿ ತಾವು ಹೇಳಬೇಕಾಗಿರುವುದು ಏನೆಂದರೆ, ಈ ಕಾಮಗಾರಿಯನ್ನು ತೆಗೆದುಕೊಂಡಿರುವ contractors ಪುನಃ ಅದನ್ನು sub contractors ಗೆ ಕೊಟ್ಟಿದ್ದಾರೆಯೇ ಇಲ್ಲವೇ? ಈ ಗುತ್ತಿಗೆದಾರರು ತೆಗೆದುಕೊಂಡಿರುವ ಕಾಮಗಾರಿಗಳು ಏನಿವೆ,. ಇವರು ಎಷ್ಟು ಪ್ರತಿಷ್ಠಿತವಾಗಿ ಏನೇನು ಅಂಶಗಳನ್ನು Stoop consultancy ಯವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಏನೇನು ಕಾನೂನು ಇಟ್ಟಿದ್ದರೋ ಅದಕ್ಕನ್ನುಗುಣವಾಗಿ ಈ ಗುತ್ತಿಗೆದಾರರು ಕೆಲಸ ಮಾಡಿದ್ದಾರೆಯೇ? sub contract ಮಾಡಿದ್ದಾರೆಯೇ? ಮತ್ತು ಹೂಳನ್ನು ತೆಗೆಯುವಾಗ 25 ವರ್ಷಗಳ ಹಿಂದೆ ಕಟ್ಟಿದ ಹಳೆಯ drainಗಳು ಬಿದ್ದು ಹೋಗುತ್ತಿವೆ. ನೀವು ಹೂಳನ್ನು ತೆಗೆದು ಹಾಗೆ ಬಿಟ್ಟರೆ ಅದರ ಗತಿಯೇನು? ಮೊದಲಿನಿಂದ ನಾವು pilot drainಗಳನ್ನು ಮಾಡಬೇಕೆಂದು ಹೇಳುತ್ತಿದ್ದೇವೆ. ಇವತ್ತಿನವರೆಗೆ ಅದನ್ನು ಮಾಡಿಲ್ಲ. ಜಲಮಂಡಲಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಒಟ್ಟಿಗೆ ಸೇರಿ ಈ ಸಮನ್ವಯತೆಯಿಂದ ಈ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ಹಿಂದೆಯೂ ಕೂಡ ಹೇಳಿದ್ದೆ, ಈಗಲೂ ಕೂಡ ಹೇಳುತ್ತಿದೇನೆ. ಇದನ್ನು ಮಾಡಿದ್ದಾರೆಯೇ? ಇದರೊಂದಿಗೆ ಎಲ್ಲೋ ಒಂದೊಂದು ಕಡೆ ಸಣ್ಣ ಸಣ್ಣ ಬ್ರಿಡ್ಜಸ್ ಬಿದ್ದಿರುವುದರಿಂದ ಸಾಮಾನ್ಯ

ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಹಲವಾರು ಬಾರಿ ಹೋಗಿ ನೋಡಿದ್ದಾರೆ. ಈ primary drain, secondary drain ಜೊತೆಗೆ major drains ಏನಿವೆ. ಈ major drainನ್ನು ತೆಗೆದುಕೊಳ್ಳುವಾಗ ಯಾವ ಮಾನದಂಡವನ್ನು ಹಾಗೂ ತಾಂತ್ರಿಕವಾದ ವ್ಯವಸ್ಥೆಯನ್ನು ಅಳವಡಿಸಿದ್ದಾರೆ? ಇಂತಹ ಅನೇಕ ವಿಚಾರಗಳನ್ನು ತಾವು ಎಲ್ಲೋ ಒಂದು ಕಡೆ ಮಾತನಾಡುವಾಗ, ಇದರಲ್ಲಿ ದೋಷ ಎಷ್ಟಾಗಿದೆ ಮತ್ತೊಂದು ಎಷ್ಟಾಗಿದೆ ಎನ್ನುವುದಕ್ಕಿಂತ ಈ ನಗರದ ಜನರಿಗೆ ಅನಾನುಕೂಲ ಆಗುತ್ತದೆ. ಆದ್ದರಿಂದ ನಾನು ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಒಂದು ಸದನ ಸಮಿತಿ ಮಾಡುವುದರಿಂದ ಯಾರಿಗೂ ಏನೂ ಅನಾನುಕೂಲ ಆಗುವುದಿಲ್ಲ. ಈ ಯೋಜನೆ ಪ್ರಾಯಶಃ ಬೇರೆ ಬೇರೆ ರಾಜ್ಯದವರು ಈಗಾಗಲೇ ಹತ್ತಾರು, ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ಉಪಯೋಗ ಮಾಡುತ್ತಿದ್ದಾರೆ. ನಮ್ಮವರು ಏನೇನೂ ಉಪಯೋಗ ಮಾಡುತ್ತಿಲ್ಲ. ಇದರ ನೆಪದಲ್ಲಿ ಎಲ್ಲೋ ಒಂದು ಕಡೆ ರಾಜ್ಯಕ್ಕೆ ಬರತಕ್ಕಂಥ ಹಣ ನಿಲ್ಲಬಾರದು. ಅದಕ್ಕೆ ತಮ್ಮ ನಿರ್ದಿಷ್ಟವಾದ ಕಾರ್ಯಕ್ರಮ ಏನು ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಬೆಳಕು ಚೆಲ್ಲಬೇಕು. ನಾವು ಎಂದೂ ಕೂಡ ತಾವು ಮಾಡಿಲ್ಲ ಹೆಚ್ಚಾಗಿ ಇವತ್ತು ಆಗಿರತಕ್ಕಂಥ ತಾಂತ್ರಿಕ ದೋಷಗಳನ್ನು ಸರಿಪಡಿಸತಕ್ಕದ್ದಕ್ಕೆ ತಮ್ಮ ಪ್ರಕ್ರಿಯೆ ಪ್ರಾರಂಭ ಆಗಲಿ ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎ.ಕೃಷ್ಣಪ್ಪ (ವರ್ತೂರು): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಚಳ್ಳಘಟ್ಟ ವ್ಯಾಲಿ ಬರುತ್ತದೆ. ಮೊದಲಿಗೆ ನನಗೆ Corporation Ward 6 ಇತ್ತು. ಈಗ ತಾವು ಕೊಟ್ಟ ಪ್ರಸಾದ ಇಡೀ ವರ್ತೂರು ವಿಧಾನಸಭಾ ಕ್ಷೇತ್ರ Greater Bangalore ಗೆ ಸೇರಿಕೊಂಡಿದೆ ಇಡೀ ಕ್ಷೇತ್ರವನ್ನು ಗ್ರೇಟರ್ ಬೆಂಗಳೂರು ಮಡಿಲಿಗೆ ಹಾಕಿ ನಮ್ಮನ್ನು ನೀವು ಕತ್ತಲಿಗೆ ತಳ್ಳಿದ್ದೀರಿ. ನಾನು ಮೊಟ್ಟಮೊದಲಿಗೆ ಡಾ॥ ಸುಬ್ರಮಣ್ಯಂ ಅವರು ಛಾರ್ಜ್ ತೆಗೆದುಕೊಂಡ ಮೇಲೆ ಅವರನ್ನು ಭೇಟಿ ಮಾಡಿದ್ದೆ. ಅವರಿಗೆ ನಾನು ಫಸ್ಟ್ ಕೇಳಿದ ಪ್ರಶ್ನೆ. ಅವರು ಇಲ್ಲೇ ಸದನದಲ್ಲಿ ಇದ್ದಾರೆ. ಅವರು ಗ್ಯಾಲರಿಯಲ್ಲಿದ್ದಾರೆ. ಈಗ ಆಗಿರುವ Works inspection ಯಾರು ಮಾಡುತ್ತಿದ್ದೀರಾ ಎಂದು ಕೇಳಿದ್ದೆವು. ನಾನು ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ತೆಗೆದುಕೊಂಡು ಬರುವುದು ಏನೆಂದರೆ ಡಾ॥ ಸುಬ್ರಮಣ್ಯಂ ಅವರು ಛಾರ್ಜ್ ತೆಗೆದುಕೊಂಡ ಮೇಲೆ ಒಂದು ವಾರ ಆದ ಮೇಲೆ ಅವರನ್ನು ಭೇಟಿ ಮಾಡಿದ್ದೆ. ಈ Open drainages ಏನು ಇದೆ?

ಮತ್ತೆ ಈ valley activities ಏನು ಇದೆ, ಇದನ್ನು inspection ಮಾಡಿ ನಾನು It is a worst quality ಎಂದು ಅವರ ಗಮನಕ್ಕೆ ತಂದೆ. ಮತ್ತೆ ಯಾವುದೇ ಒಂದು ಪ್ರಾಜೆಕ್ಟ್ ನೋಡಿ. ಈಗ ನಾವು ಎಲ್ಲೆಲ್ಲಿ activities ಕೊಟ್ಟಿದ್ದೇವೆ, ಆ ಒರಿಜಿನಲ್ ಕಂಟ್ರಾಕ್ಟರ್ ಯಾರೂ ಅಲ್ಲಿ ಇಲ್ಲ. ಎರಡನೇ ಕೈ, ಮೂರನೆಯ ಕೈ, ನಾಲ್ಕನೇ ಕೈ, ಐದನೆಯ ಕೈ. ಮಣ್ಣು ಹಾಕುವವನು ಒಬ್ಬನು, ಮರಳು ಹಾಕುವವನು ಒಬ್ಬನು. ಈ ರೀತಿ ಆದಂತಹ ಒಂದು ಸಂದರ್ಭ ಇದ್ದು ಕ್ವಾಲಿಟಿ ಸಂಪೂರ್ಣವಾಗಿ ಹಾಳಾಗಿದೆ. ಯಾರ ಕಂಟ್ರೋಲೂ ಇಲ್ಲ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ? ಅಲ್ಲಿ ಇಲ್ಲಿ ಏನಾದರೂ ನನ್ನ ಗಮನಕ್ಕೆ ಬಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಾರೆ. ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ? ಈಗ 125 ಕೋಟಿ ರೂಪಾಯಿ ಪೇಮೆಂಟ್ ಆಗಿರಬಹುದು. ಆದರೆ ಹೋಗಿರುವ ಹಣ Vs physical turn-over of work ಏನು ಇದೆ? ಅದಕ್ಕೆ ಸಮಜಾಯಿಸಿ ಕೊಡುವವರು ಅವರ ಡಿಪಾರ್ಟ್‌ಮೆಂಟಿನವರು ಕಾರ್ಪೋರೇಷನ್‌ನಲ್ಲಿ ಯಾರಿದ್ದಾರೆ? ಕಮೀಷನರ್ inspection ಮಾಡಿದ್ದಾರಾ? ಚೀಫ್ ಇಂಜಿನಿಯರ್ ಎಲ್ಲಾ ವರ್ಕ್ಸ್ ಅನ್ನು inspection ಮಾಡಿದ್ದಾರಾ? ಅವರು ಹೇಳಿದರು, ಇವರು ಕೇಳಿದರು. ಅದಕ್ಕೋಸ್ಕರ ನಾವೇನು ಡಿಮ್ಯಾಂಡ್ ಮಾಡಿದ್ದೇವೆಂದರೆ ಒಂದು ಸದನ ಸಮಿತಿಯನ್ನು constitute ಮಾಡಿ. ಇನ್ನೂ ಒಂದು ಸಲಹೆಯನ್ನು ಕೊಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳೇ ಆ ಪೋರ್ಟ್‌ಪೋಲಿಯೋವನ್ನು ಇಟ್ಟುಕೊಂಡಿದ್ದಾರೆ. ಈಗ ಹೇಗೆ ಆಗಿದೆ ನಮ್ಮ ಹಳ್ಳಿಗಳು ಎಂದರೆ ಇವರ ಆಶೀರ್ವಾದದಿಂದ ಬಹಳ ಒಳ್ಳೆಯ ಬೆಳಕು, ಒಳ್ಳೆಯ ಗಾಳಿ. ಕಸ ತೆಗೆದು ಎಷ್ಟೋ ದಿನಗಳಾಗಿದೆ. ಬುಡ್ಡಿ ದೀಪ ಇಲ್ಲ. ಅದನ್ನು ಕೇಳಿ, ಕೇಳಿ ನಾವು ಆಫೀಸರ್‌ಗೆ ಹೇಳಿ ಹೇಳಿ, ನಾವು ಆ ಆಫೀಸರ್‌ಗೆ ಹೇಳುವುದನ್ನು ಬಿಟ್ಟಿದ್ದೇವೆ. ಹೀಗೆಯೇ ಇರಲಿ ಎಂದು ಹೇಳುತ್ತೇನೆ. ಇವರು ಯಾವಾಗ administration ಬದಲಾವಣೆ ಮಾಡಿದರೋ ಆಗ ಇವರು ಅದಕ್ಕೆ ತಕ್ಕನಾದಂಥ ಏನೋ infrastructure administration ನಲ್ಲಿ ಬೇಕಾಗಿತ್ತು? ಅದನ್ನು ಮಾಡಿಕೊಳ್ಳಬೇಕಾಗಿತ್ತು. ಈಗ ಯಾರನ್ನು ಯಾರೂ ಕೇಳುವ ಹಾಗಿಲ್ಲ. ಜಿಲ್ಲಾ ಪಂಚಾಯತ್‌ನವರು ಕೈ ತೊಳೆದುಕೊಂಡರು. ಕಾರ್ಪೋರೇಷನ್‌ನವರು ಅವರಿಗೆ ಯಾವ ಒಂದು ಕೆಲಸವನ್ನೂ ಮಾಡಲಿಕ್ಕೆ ಆಗುತ್ತಿಲ್ಲ. ಮೇ 23ನೇ ತಾರೀಖು ಶಾಲೆಗಳು ಓಪನ್ ಆಗಿದ್ದಾವೆ. ಇವತ್ತಿನವರೆಗೂ ಎಲ್ಲಾದರೂ ಒಂದು ಕಿಟಕಿ ಇಡಬಹುದು, ಒಂದು ಮಗುವಿಗೆ ಕುಡಿಯುವುದಕ್ಕೆ ನೀರಿನ ಒಂದು ಕೊಳಾಯಿ ಕೊಡಬಹುದು. ಒಂದು toilet ಕೊಡಬಹುದು, ಒಂದು ಕ್ಲಾಸ್ ರೂಮ್

ಕಟ್ಟಬಹುದು. ಇದಕ್ಕೆ ಇವತ್ತಿನವರೆಗೂ ಅವರ ಆಡಳಿತದಲ್ಲಿ ಉತ್ತರ ಇಲ್ಲ. infrastructure ಎಂದು ಮೂರು ಕಾಸಿನ ಕೆಲಸವನ್ನು ಇವತ್ತಿನವರೆಗೆ ಮಾಡುವುದಕ್ಕೆ ಆಗಲಿಲ್ಲ. ಬಡವರೇ ಓದುವಂತಹ ಹಾಸ್ಟೆಲ್‌ಗಳು ಇವತ್ತು ಭಿಕಾರಿ ಕುಣಿತಗಳು ಆಗಿವೆ. ಇಂತಹ ಒಂದು ಆಡಳಿತ ನಡೆಯುತ್ತಿದೆ ಎಂದು ನಾನು ಹಿಂದೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದೆ. ಹಾಗಾದರೂ ಅವರು ಏನಾದರೂ ಛಾಟಿ ತೆಗೆದುಕೊಳ್ಳುತ್ತಾರೇನೋ ಎಂದು ತಿಳಿದೆ. ಛಾಟಿನೂ ತೆಗೆದುಕೊಳ್ಳಲಿಲ್ಲ, ಬಳಪವನ್ನು ತೆಗೆದುಕೊಳ್ಳಲಿಲ್ಲ. ಅದು ಹಾಗೆಯೇ ಇದೆ. ಅದಕ್ಕೆ ಈಗ ಸದನ ಸಮಿತಿ ಅನಿವಾರ್ಯ. ಇನ್ನೂ ಇವರ administration ಸರಿ ಹೋಗಬೇಕಾದರೆ ನಾನು ಒಂದು ಸಲಹೆ ಕೊಡುತ್ತೇನೆ. ಒಂದೊಂದು ಕೆಲಸಕ್ಕೆ ಒಂದೊಂದು ಕಮೀಷನರ್, ಚೀಫ್ ಇಂಜಿನಿಯರ್ ಎಂದು ಮಾಡಿ ಬಿಡಲಿ. Commissioner for Inspection, Commissioner for Commission, Commissioner for Execution, Commission for Monitoring, ಮತ್ತೆ Commissioner for Meeting. ಏಕೆಂದರೆ ಈಗ ಹೊಸ ಸಂಪ್ರದಾಯಗಳು ಏನಾಗಿದೆ ಅಂದರೆ ಈ ಸರ್ಕಾರದಲ್ಲಿ ಜನತಾ ಪ್ರತಿನಿಧಿಗಳನ್ನು, ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ಮರೆತು ಹೋಗಿದ್ದಾರೆ. ಬಜೆಟ್ 3200 ಕೋಟಿ ರೂಪಾಯಿ ಮಾಡಿದರು. Representatives ಯಾರನ್ನೂ ಕೇಳಲಿಲ್ಲ. ಎಂ.ಪಿ.ಗಳಾಗಲೀ, ಎಂ.ಎಲ್.ಎ.ಗಳನ್ನಾಗಲೀ ಯಾರನ್ನೂ ಕೇಳಲಿಲ್ಲ. ಇಲ್ಲಿ ಕುಳಿತುಕೊಂಡು ಸನ್ಮಾನ್ಯ ಪ್ರಕಾಶ್ ಅವರು, ನಮ್ಮ ಮಾನ್ಯ ಯಡಿಯೂರಪ್ಪನವರು, ಮಾನ್ಯ ಅಶೋಕ್ ಅವರು ದೊಡ್ಡ ದೊಡ್ಡ ಮಾತುಗಳನ್ನು ಆಡಿದರು ಏಯ್, ಪ್ರಜಾಪ್ರಭುತ್ವ ಎಂದರೆ ಏನ್ರಿ ಗೊತ್ತಿದೆ? ಸುಮ್ಮನೇ ನೀವು ಸರ್ಕಾರ ನಡೆಸುತ್ತೀರಾ ಎಂದರು. ಸ್ವಾಮಿ, ಇವತ್ತಿನವರೆಗೂ ಅವರು ಒಂದು ಮೀಟಿಂಗ್ ಕರೆಯಬೇಕು ಎನ್ನುವುದು ಯಾವ ಒಂದು ಮುಖ್ಯವಾದ ಸಂದರ್ಭದಲ್ಲಿ ಬರಲಿಲ್ಲ. ಮೊನ್ನೆಯೇನೋ ಮಾನ್ಯ ಅಶೋಕ್ ಅವರು ಒಂದು ಮೀಟಿಂಗ್ ಕರೆದು 2–3 ಗಂಟೆ ಮಾತನಾಡಿ, ಕಾಫಿ, ಟೀ, ಊಟ ಕೊಟ್ಟು ಕಳುಹಿಸಿದ್ದಾರೆ. ಅಂದರೆ 3200 ಕೋಟಿ ರೂಪಾಯಿ ಬಜೆಟ್ ಅನ್ನು ಪ್ರೆಸೆಂಟ್ ಮಾಡಿದ ಈ ಸರ್ಕಾರ 18% ನಾವೇನು ಮಾಡಬೇಕೆಂದು ಇವತ್ತಿನವರೆಗೆ ಹೇಳಲಿಲ್ಲ. ಅದಕ್ಕೆ ನಾನು ಸಲಹೆ ಮಾಡುತ್ತಿದ್ದೇನೆ. ಒಂದೊಂದು ಕೆಲಸಕ್ಕೆ ಒಬ್ಬೊಬ್ಬ ಕಮೀಷನರ್ ಅವರನ್ನು ಅಪಾಯಿಂಟ್ ಮಾಡಿ. ಒಂದೊಂದು ಕೆಲಸ inspection ಮಾಡಲಿಕ್ಕೆ ಒಬ್ಬೊಬ್ಬ ಆಫೀಸರ್ ಅವರನ್ನು ನೇಮಕ ಮಾಡಿ. ಆಗಲಾದರೂ quality assurance, ಆಗಲಾದರೂ ನಿಮಗೆ ಸರಿಯಾದಂತಹ ರಿಪೋರ್ಟ್, ಆಗಲಾದರೂ

ಇಂಪ್ಲಿಮೆಂಟೇಷನ್ ಆಗುತ್ತದೆ ಎನ್ನುವ ಬಯಕೆಯನ್ನು ಇಟ್ಟುಕೊಂಡು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ಮಹಾನಗರ ಗ್ರೇಟರ್ ಪಾಲಿಕೆಗೆ ಸೇರಿಸಿ. ನಮ್ಮ ಅಕೌಂಟ್‌ನಲ್ಲಿ 50 ಕೋಟಿ, 60 ಕೋಟಿ ರೂಪಾಯಿ ಇವರು ಟೇಕ್ ಓವರ್ ಮಾಡಿದಾಗ ಇತ್ತು. ಕಡೆಯ ಪಕ್ಷ ಈ ವರ್ಷ ಅದಾದರೂ ಕೊಟ್ಟಿದ್ದರೂ ಕೂಡ ಸಾರ್ಥಕ ಆಗುವುದು. ಕೊಡಲಿಲ್ಲ. ಇದೇ ಬಜೆಟ್ ಪ್ರೆಸೆಂಟ್ ಮಾಡಿದರು ಸ್ಟೇಟ್‌ದ್ದು ಮತ್ತೆ ಮಹಾನಗರ ಪಾಲಿಕೆಯದು. ಇವತ್ತಿನವರೆಗೆ ಎಷ್ಟು ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಕುಡಿಯುವ ನೀರಿಲ್ಲ, ದೀಪ ಇಲ್ಲ. ಯಾವ ವಿದೇಶದಿಂದ ಬಂಡವಾಳದಾರರು ಬಂದು ಇವತ್ತು ಬೆಂಗಳೂರು ಮಹಾನಗರದ ಸುತ್ತ ಮುತ್ತ, ಆಜು ಬಾಜು 40 ಸಾವಿರ, 50 ಸಾವಿರ ಕೋಟಿ ಬಂಡವಾಳಗಳನ್ನು ಹಾಕುತ್ತಿದ್ದಾರೆ. ಅವರು ಓಡಾಡುವ ಜಾಗದಲ್ಲಿ ರಸ್ತೆಯೂ ಇಲ್ಲ, ದೀಪವೂ ಇಲ್ಲ. ಇಂತಹ ಒಂದು ಪರಿಸ್ಥಿತಿ ಉದ್ಭವ ಆಗಿದೆ. ಅದು separate issue ಇವತ್ತು ನಮ್ಮ ಮುಖಂಡರುಗಳು ಏನು ಇಲ್ಲಿ ಒಂದು ಇಶ್ಯೂವನ್ನು ತೆಗೆದುಕೊಂಡಿದ್ದಾರೆ? ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಪಾರದರ್ಶಕ ಅವರದ್ದು ಪ್ರಯಾರಿಟಿ. Top priority Chief Minister ಅವರದ್ದು. ಅದಕ್ಕೆ ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಸದನ ಸಮಿತಿ ಮಾಡಲಿ. ಯಾರ್‍ಯಾರು ನಮಗೆ ತಿಳುವಳಿಕೆ ಇದೆಯೋ, ಎಲ್ಲೆಲ್ಲಿ ಎಷ್ಟೆಷ್ಟು ಲೋಡ್ ಎತ್ತಿದ್ದಾರೆ? ಎಷ್ಟು ಅಡಿ ಎತ್ತಿದ್ದಾರೆ? ಎಷ್ಟು ಕಿ.ಮೀ. ಎತ್ತಿದ್ದಾರೆ? ಇನ್ನು ಈ storm drainages ಶ್ರೀಮಾನ್ ಧರ್ಮಸಿಂಗ್ ಅವರು ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾಗ, ಎಲ್ಲೆಲ್ಲಿ ಅನಾಹುತಗಳು ಆಯಿತು? ಆ ಜಾಗಗಳಿಗೆಲ್ಲಾ ಬಂದು 23 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಅದನ್ನೂ ಸಹ ಡಾ: ಸುಬ್ರಹ್ಮಣ್ಯಂ ಅವರಿಗೆ ಹೇಳಿದ್ದೇನೆ. ಏನೆಂದು ಹೇಳಿದ್ದೇನೆಂದರೆ inspection ಮಾಡಿಸಿ. Original Contractors ಒಬ್ಬರೂ ಇಲ್ಲ. ಕ್ವಾಲಿಟಿ ಇಲ್ಲ, ಎಲ್ಲಾ ಈ ಸಾರಿ ಭಾರಿ ಮಳೆ ಬಂದರೆ ಆ drainage ಅನ್ನು ಆ ಮಳೆಯೇ ತೆಗೆದುಕೊಂಡು ಹೋಗುತ್ತದೆ. inspection ಮಾಡಿ ಎಂದೆವು. ನಾವು ಎಲ್ಲಾ works inspection ಮಾಡಲಿಕ್ಕೆ ಆಗಲಿಲ್ಲ. ಕೆಲವು ಮಾಡಿ ಅದನ್ನು ಅವರ ಗಮನಕ್ಕೆ ತಂದಿದ್ದೇನೆ. ಹಿಂದೆ ಇದ್ದ ಕಮೀಷನರ್ ಅವರ ಗಮನಕ್ಕೂ ತಂದಿದ್ದೆ. ಆದ್ದರಿಂದ ಈ ಸದನ ಸಮಿತಿ ಮಾಡುವುದರ ಮುಖೇನ ಅವರ ಕಳಕಳಿ ಏನು ಇದೆ ಆ ಕಳಕಳಿಯನ್ನು ಕಾರ್ಯ ರೂಪದಲ್ಲಿ ಅವರು ಜಾರಿ ಮಾಡಲಿ ಎಂದು ಹೇಳಿ ತಮ್ಮ ಮುಖಾಂತರ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿ ನಗರ): ಅಧ್ಯಕ್ಷರೆ, ನಾನು ಎರಡೇ ನಿಮಿಷ ಮಾತನಾಡುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಲೋಕಾಯುಕ್ತಕ್ಕೆ ಈಗಾಗಲೇ ಇದರ ಬಗ್ಗೆ ತನಿಖೆ ಮಾಡಲು ಹೇಳಿದ್ದೇವೆ, enquiry ಮಾಡುತ್ತಿದ್ದಾರೆಂದು ಹೇಳಿದರು. ಆದರೆ ಲೋಕಾಯುಕ್ತರ ಮುಂದೆ ಬೇಕಾದಷ್ಟು ಕೇಸುಗಳು ಇರುತ್ತವೆ ಮತ್ತು ಇದೊಂದು ದೊಡ್ಡ ಹಗರಣ. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ಆಗಿದ್ದಾವೆ ಎಂದು ನೋಡಿದ್ದೇವೆ. ಆದ್ದರಿಂದ ಕೇವಲ 150 ಕೋಟಿ ರೂಪಾಯಿ ಎಂದು ಹೇಳುತ್ತಿದ್ದಾರೆ. ಇದು ಸಣ್ಣ ಮೊತ್ತ ಏನಲ್ಲ. ಅದು ಭಾರಿ ದೊಡ್ಡ ಮೊತ್ತ. ಆದ್ದರಿಂದ ಲೋಕಾಯುಕ್ತದವರು ಅವರು ಎಷ್ಟರ ಮಟ್ಟಿಗೆ ಎಲ್ಲಾ ಕಡೆ ಓಡಾಡಿ ಇದರ ಬಗ್ಗೆ ಅವರು ಸರಿಯಾದ ರೀತಿಯಲ್ಲಿ ತನಿಖೆ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂದು ಒಂದು ಕಡೆ ನನಗೆ ಅನುಮಾನವಿದೆ. ಇನ್ನೊಂದು ಕಡೆ ಎಲ್ಲೋ ಒಂದು ಕಡೆ ಅಧಿಕಾರಿಗಳ ಮೇಲೆ ಮತ್ತು ಇಲ್ಲಿ ಎಲ್ಲಿ ಅವ್ಯವಹಾರಗಳು ಆಗಿದೆ? ಪ್ರತಿ ಒಂದು ಕ್ಷೇತ್ರದಲ್ಲೂ ಆಗಿದೆ. ಆದ್ದರಿಂದ ಬೆಂಗಳೂರಿನಲ್ಲಿರತಕ್ಕ ಶಾಸಕರು ಮತ್ತು ಬೇರೆ ಬೇರೆ ಯಾರು ಜವಾಬ್ದಾರಿಯಿಂದ ಇರತಕ್ಕ ಶಾಸಕರನ್ನು ಸೇರಿಸಿ ಒಂದು ಸದನ ಸಮಿತಿ ಮಾಡಿದರೆ ಖಂಡಿತವಾಗಿ ಇದಕ್ಕೆ ಮಾನ್ಯಮುಖ್ಯಮಂತ್ರಿಗಳ ಕೈಯಿಂದ ಈ ಒಂದು ವ್ಯವಸ್ಥೆಯನ್ನು ಸರಿ ಮಾಡತಕ್ಕ ಹೆಜ್ಜೆ, ಒಂದು ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇದರಲ್ಲಿ ಅವ್ಯವಹಾರವಂತೂ ಆಗಿದೆ. ಬಹುಶಃ ನಮ್ಮ ಕಾರ್ಪೋರೇಷನ್‌ನ್ನಿನ ಆಯುಕ್ತರಿಗೂ ಕೂಡ ಅದರ ಬಗ್ಗೆ ಗೊತ್ತಾಗಿದೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಗೊತ್ತಾಗಿದೆ. ಆದ್ದರಿಂದಲೇ ಅವರು ಎಲ್ಲೋ ಒಂದು ಕಡೆ ಉತ್ತರದಲ್ಲಿ ಹೇಳಿದ್ದಾರೆ. ಆದ್ದರಿಂದ ಇದನ್ನು ಲೋಕಾಯುಕ್ತ ತನಿಖೆಗೆ ಒಳಪಡಿಸುವುದು ಒಂದು ಕಡೆ. ಆದರೆ ಸದನ ಸಮಿತಿ ಮಾಡುವುದು ಬಹಳ ಮುಖ್ಯವಾಗಿದೆ. ಸಮಿತಿಯಲ್ಲಿ ಈ ವಿಚಾರದ ಬಗ್ಗೆ ಏನೇನು ಲೋಪದೋಷಗಳು ಆಗಿವೆ? ಅದನ್ನು ಕೂಡ ಬಯಲು ಮಾಡಿ ಮುಂದೆ ಆಗತಕ್ಕಂಥ ಕೆಲಸ ಸರಿಯಾದ ರೀತಿಯಲ್ಲಿ ಆಗುವುದಕ್ಕೆ ಒಂದು ಕಾರ್ಯ ವಿಧಾನ ಆಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ನೆ.ಲ.ನರೇಂದ್ರಬಾಬು(ರಾಜಾಜಿನಗರ): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಕೇಳಿ ಆದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ತಿಳಿಯಪಡಿಸುವುದು ಏನೆಂದರೆ ನಮ್ಮಲ್ಲಿ ಮಳೆ ಜಾಸ್ತಿ ಆದ ಹಾಗೆಲ್ಲಾ ಪ್ರವಾಹ ಬರುತ್ತಿತ್ತು. ನವರಂಗ್ ಥಿಯೇಟರ್‌ನಿಂದ ಡೌನ್

ಬಂದರೆ ವರಲಕ್ಷ್ಮಿ ನರ್ಸಿಂಗ್ ಹೋಮ್ ಹಿಂಭಾಗದ ಸೆಕೆಂಡ್ ಸ್ಟೇಜ್ ರಾಜಾಜಿನಗರ ಸಂಪೂರ್ಣ, ಪ್ರಕಾಶ್‌ನಗರ ಬೆಲ್ಟ್, 6th block SJR ಸುತ್ತ ಮುತ್ತ ಮತ್ತೆ West of Chord ನಲ್ಲಿ ಬಹುಶಃ ಈ ಪ್ಯಾಕೇಜ್ ಆದ ಮೇಲೆ ನಾವು ಅಂದುಕೊಂಡಿದ್ದು ಏನೆಂದರೆ ಸಂಪೂರ್ಣವಾಗಿ ಈ ಸಮಸ್ಯೆ ಬಗೆಹರಿಯುತ್ತದೆ ಎಂದು. ಇದರಲ್ಲಿ ಈಗಾಗಲೇ ಏನು ತೋರಿಸಿದ್ದೀರಿ? 56 ಕೋಟಿ 95 ಲಕ್ಷ ವೃಷಭಾವತಿಯಲ್ಲಿ ಪೇಮೆಂಟ್ ಆಗಿದೆ ಎಂದು ತೋರಿಸಿದ್ದೀರಿ. ಇಲ್ಲಿ ಯಾರು ಎತ್ತ ಎನ್ನುವುದರ ಬಗ್ಗೆ ನಾವು ತಮ್ಮ ಮುಖೇನ ಏಕೆ ಹೇಳುತ್ತೇವೆಂದರೆ, ಒಬ್ಬ ಜನ ಪ್ರತಿನಿಧಿಗಳಾಗಿ ನಮಗೂ gross root level ನಲ್ಲಿ field reality ಏನೆಂಬುದು ಗೊತ್ತಿರುತ್ತದೆ. ನಿಮಗೆ ರಾಮನಗರದ ಬಗ್ಗೆ ಹೇಗೆ ಗೊತ್ತಿರುತ್ತದೋ ಅಥವಾ ನಿಮ್ಮ ಕ್ಷೇತ್ರದ ಬಗ್ಗೆ ಹೇಗೆ ಗೊತ್ತಿರುತ್ತದೋ, ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಕೆಲಸಗಳಾಗುತ್ತಿವೆ ಎಂಬುದನ್ನು ಹೇಳಿ. ಇದರಲ್ಲಿ ಎಷ್ಟು ಮೋಸ ನಡೆದಿದೆ ಎಂದರೆ, even stoop consultants ನವರು ಎಲ್ಲೆಲ್ಲಿ ಏನೇನು ತೊಡಕುಗಳಿವೆ, ಅವುಗಳನ್ನು ಹೇಗೆ rectification ಮಾಡಬೇಕೆಂದು practical ಆಗಿ ಅವರಿಗೆ ಕೊಟ್ಟಿರುವುದು. ಇವರು ಭಾರಿ experts ಎಂದು ಭಾವಿಸಿ ಈ stoop consultantsಗೆ ಈ ಕೆಲಸವನ್ನು ಕೊಟ್ಟರು. ಅವರು ಸಂಪೂರ್ಣ ಕೊಟ್ಟಿರುವ ಮಾಹಿತಿಗಳು ಸತ್ಯಕ್ಕೆ ದೂರವಾದಾಗ, ಅಂದಿನ ಆಯುಕ್ತರ ಛೇಂಬರ್‌ನಲ್ಲಿ ಸಭೆ ನಡೆದ ಸಂದರ್ಭದಲ್ಲಿ ನಾವು ಲೋಪ ದೋಷಗಳನ್ನು ಎತ್ತಿ ತೋರಿದಾಗ, 'ಹೌದು, ಅದನ್ನು ಸರಿಪಡಿಸುತ್ತೇವೆ ಅಥವಾ ಇದರ ಬಗ್ಗೆ ಸಮೀಕ್ಷೆ ಮಾಡಿದ್ದೇವೆ' ಎಂದರು. ಅವರು ಸಮೀಕ್ಷೆಯನ್ನೂ ಮಾಡಿರಲಿಲ್ಲ. ಎರಡನೆಯದಾಗಿ, ಕೆಲಸ ಶುರು ಮಾಡಿದ್ದೂ ಗೊತ್ತಿಲ್ಲ, completeಆಗಿರುವುದೂ ಗೊತ್ತಿಲ್ಲ. ಅಲ್ಲಿ ಕೆಲಸವಾಗಿದೆಯೆಂದು report ಕೊಡುತ್ತಾರೆ. ನಾವು ಯಾರನ್ನು ಕೇಳಬೇಕು? ತಾವು ಸಂಬಂಧಪಟ್ಟ ಸಚಿವರು. ಆಯುಕ್ತರುಗಳು ಬದಲಾವಣೆಯಾದಾಗ, ಸಭೆಗಳು ಸೇರಿದಾಗ, "ಹೇಳುತ್ತೇವೆ", "ಮಾಡುತ್ತೇವೆ", "ನೋಡುತ್ತೇವೆ" ಎನ್ನುತ್ತಾರೆ. ಆದರೆ, ನಾವು ಜನರಿಗೆ ಉತ್ತರ ಕೊಡಬೇಕಲ್ಲವೇ? ಇಲ್ಲಿ ಆಗಿರುವುದನ್ನು ನೋಡಿದರೆ, ನನ್ನ ಮತ್ತು ಮಾನ್ಯ ಸದಸ್ಯರಾದ ದಿನೇಶ್ ಗುಂಡೂರಾವ್, ಸೋಮಣ್ಣನವರ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ವೃಷಭಾವತಿ ಕಣಿವೆ ಬರುತ್ತದೆ. ಇನ್ನು ಮುಂದೆ ಸಹ ದುಡ್ಡು ಖರ್ಚಾಗುವುದಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಮಹಾನಗರ ಪಾಲಿಕೆ, ಈ ಮೂರೂ ಸಂಸ್ಥೆಗಳ ಸಹಯೋಗದೊಂದಿಗೆ ಈ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಈ ಹಣಕ್ಕೆ accountability ಬೇಡವೇ? ಪಾರದರ್ಶಕತೆ

ಬೇಡವೇ? ಈ ಸಂದರ್ಭದಲ್ಲಿ ನಾನು ಬಹಳ ಸ್ಪಷ್ಟವಾಗಿ ಕೇಳುತ್ತೇನೆ. ಒಂದು social audit, ಒಂದು work audit ಅಥವಾ ಒಂದು moral audit ಎನ್ನುವುದು ಇಲ್ಲದೇ ಹೋದರೆ, ಎಲ್ಲವೂ ಕೇವಲ ಪುಸ್ತಕದ ಬದನೇಕಾಯಿ ಆಗಿಬಿಟ್ಟರೆ, ನಾಳೆ ದಿವಸ ನಾವು ಜನರ ಮುಂದೆ ಹೋಗುವುದಾದರೂ ಹೇಗೆ? ಇವತ್ತು ಮಹಾನಗರಪಾಲಿಕೆಯಲ್ಲಿ ದುಡ್ಡಿಲ್ಲವೆಂದೇ ಕೇಂದ್ರಸರ್ಕಾರ, ರಾಜ್ಯ ಸರ್ಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯು ಸಂಯುಕ್ತವಾಗಿ ಕೈಗೊಂಡಿರುವ ಯೋಜನೆಯಾಗಿದೆ. ಇದರ ಬಗ್ಗೆ ನೀವು ಇಷ್ಟು ಹಗುರವಾಗಿ ಹೇಳಿಬಿಟ್ಟರೆ, ನಮಗೆ ಎಲ್ಲಿಯೋ ಒಂದು ಕಡೆ ನಾವು ಜನಪ್ರತಿನಿಧಿಗಳಾಗಿದ್ದು, ಇದು ಸರಿಯೇ ತಪ್ಪೇ ಎಂದು ಜನರು ಕೇಳಿದಾಗ ನಮ್ಮ ಮನಸ್ಸಿಗೆ ನೋವಾಗುತ್ತದೆ. ದಯವಿಟ್ಟು ಇದರ ಬಗ್ಗೆ ತನಿಖೆಯಾಗಬೇಕು. ಸದನ ಸಮಿತಿ ಅಥವಾ ಉನ್ನತ ಮಟ್ಟದ ಸಮಿತಿ ರಚಿಸಿ ಸ್ಪಷ್ಟೀಕರಣವಾಗಬೇಕು. ಒಂದು ಶ್ವೇತ ಪತ್ರ ಹೊರಗಡೆ ಬರಲಿ, ಜನರಿಗೆ ಗೊತ್ತಾಗಲಿ. 695 ಕೋಟಿ ರೂಪಾಯಿಗಳನ್ನು ಹೂಳೆತ್ತುವುದಕ್ಕೆ ಮತ್ತು ನವೀಕರಣ ಮಾಡುವುದಕ್ಕೆ ಅವರು consultancy ನೋಡಿ, technical ಆಗಿ ಎಲ್ಲೆಲ್ಲಿ, ಏನೇನು ಮಾಡಿದ್ದಾರೆ...? ಸುಮ್ಮನೆ ಹೂಳೆತ್ತುವುದು, ಸ್ವಲ್ಪ Civil Works ಮಾಡುವುದು, ನಂತರ, ಬಿಲ್ ಮಾಡಿಸಿಕೊಂಡು ಹೋಗುವುದು. ಇಷ್ಟೇ ಆಗಿಬಿಟ್ಟರೆ, ಇದು ಹಗಲು ದರೋಡೆಯಾಗುತ್ತದೆ. ದಯಮಾಡಿ ತಾವು ಇದನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ಗಂಭೀರವಾಗಿ ತೆಗೆದುಕೊಂಡು ತನಖೆಗೊಳಪಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಶೇಖರ್‌ರವರು ಹೇಳಿದರು. ಕಾರ್ಪೋರೇಷನ್‌ನಿಂದ ಮಾಡುವ ಯಾವುದೇ resolution ಸಾಂಕೇತಿಕ, ಸರ್ಕಾರವೇ final authority ಎಂದರು. ಇದುವರೆಗೂ ಆ ತರಹದ ಯಾವುದಾದರೂ ಉದಾಹರಣೆಗಳಿವೆಯೇ? Corporation resolution ಇಲ್ಲದೇ ಯಾವುದೂ ಇದುವರೆವಿಗೂ ಸರ್ಕಾರಕ್ಕೆ ಬರುವುದಿಲ್ಲ. ಪ್ರತಿಯೊಂದು ವಿಚಾರಗಳಿಗೆ ಸಂಬಂಧಪಟ್ಟಂತೆ Corporation approval ಆದ ನಂತರವೇ, ಅಲ್ಲಿನ ಸಭೆ ಅನುಮೋದನೆ ಮಾಡಿದ ಮೇಲೆಯೇ, ಅಲ್ಲಿರುವ works Committee ಅನುಮೋದನೆ ಮಾಡಿದ ನಂತರವೇ ಸರ್ಕಾರಕ್ಕೆ ಬರುತ್ತೆ. ಆದ್ದರಿಂದ resolution ಆಗಿರುವ ದಿನಾಂಕ 5.2.2004ರಲ್ಲಿ. ಇನ್ನು ಎರಡನೆಯ clarification, ಸನ್ಮಾನ್ಯ ಪ್ರಧಾನಿಗಳಾದ ಮನಮೋಹನ್‌ಸಿಂಗ್‌ರವರ ಕನಸಿನ ಯೋಜನೆ. ಇದಕ್ಕೆ ಕೇಂದ್ರ ಸರ್ಕಾರ ಪೂರ್ತಿ ಹಣ ಕೊಡುತ್ತಿದೆ. Central Government ಕೊಡುವಂಥಾದ್ದು 35%, ಉಳಿದ 65% ಹಣವನ್ನು ಕರ್ನಾಟಕ

ರಾಜ್ಯ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಕೊಡಬೇಕು. ಇನ್ನೊಂದು, ಕೇವಲ 65% ಹಣವಷ್ಟೇ ಅಲ್ಲ, tender ನಲ್ಲಿ extra ಏನು quote ಆಗುತ್ತದೆ, 100 ರೂಪಾಯಿಗಳಿದ್ದುದು 125 ರೂಪಾಯಿಗಳಾದರೆ, ಆ 25 ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡುವುದಿಲ್ಲ. ಮತ್ತೆ work complete ಆಗಬೇಕಾದರೆ, 100 ಕೋಟಿ ರೂಪಾಯಿಗಳದ್ದು 200 ಕೋಟಿ ರೂಪಾಯಿಗಳಾದರೆ, Central Government ಕೊಡುವುದಿಲ್ಲ. ಇದು ಪೂರ್ತಿ ಕೇಂದ್ರ ಸರ್ಕಾರದ ಯೋಜನೆಯೆಂದು ತಾವು ಹೇಳಿದಿರಿ. ಆ ತರಹದ್ದು ಏನೂ ಅಲ್ಲ. ತಾವು ಇದರ ಬಗ್ಗೆ ಏನು ಪ್ರಸ್ತಾಪ ಮಾಡಿದಿರಿ, ಮೂರು ತಿಂಗಳ ಹಿಂದೆಯೇ ನಾನು ಇದರ ಬಗ್ಗೆ ಪತ್ರ ಬರೆದು, ಏನೇನು ಕಾಮಗಾರಿಗಳಾಗಿವೆ, 2003, 2004 ಮತ್ತು 2005ರಲ್ಲಿ ಏನು tender ಪ್ರಕ್ರಿಯೆಗಳಾಗಿವೆ, ಕಾಮಗಾರಿಗಳನ್ನು ಕೊಟ್ಟಿದ್ದಾರೆ, ಏನೇನು ಕೆಲಸಗಳಾಗಿವೆ. ಇದರಲ್ಲಿ ಏನೇನು ಅವ್ಯವಹಾರಗಳಾಗಿವೆ ಎಂಬುದು ಮಾಧ್ಯಮಗಳಲ್ಲಿ ಬಂದಿದೆ. ಆ ಬಗ್ಗೆ ತನಿಖೆ ಮಾಡಬೇಕೆಂದು ನಾನು ಹೇಳಿದ್ದೇನೆ. ನಿಮಗಿಂತಲೂ ಮುಂಚಿತವಾಗಿಯೇ ನಾನು ಹೇಳಿದ್ದೇನೆ. ಆದರೆ, ತಾವೇನು ಹೇಳುತ್ತಿದ್ದೀರಿ, 800 ಕೋಟಿ, 900 ಕೋಟಿ, ಅದಲ್ಲ. 14.58 ಕೋಟಿ ರೂಪಾಯಿಗಳನ್ನು ಮಾತ್ರ ಈ silt ಎತ್ತುವುದಕ್ಕೆ ಕೊಟ್ಟಿರುವುದು. ಅದರಲ್ಲಿ ಏನು ತಪ್ಪಾಗಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಯಾರು ತಪ್ಪಿತಸ್ಥ ಅಧಿಕಾರಿ ಇದ್ದಾರೆ, ಯಾರು resolution ಮಾಡಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಮಾತನ್ನೂ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎ.ಕೃಷ್ಣಪ್ಪ: ಈಗ ನಿಮ್ಮ ಮಾತುಗಳನ್ನು ಕೇಳಿ ನಮಗೆ ಬಹಳ ಸಂತೋಷವಾಯಿತು. ಅವ್ಯವಹಾರಗಳು ಆಗಿರಬಹುದೆಂಬ ವಿಚಾರ ತಮ್ಮ ಗಮನಕ್ಕೆ ಬಂದ ತಕ್ಷಣ ಕ್ರಮ ತೆಗದುಕೊಳ್ಳುವುದಕ್ಕೆ ಕಾಗದ ಪತ್ರ, ಈ ತರಹದ ವ್ಯವಹಾರಗಳನ್ನೆಲ್ಲವನ್ನೂ ತಾವು ಮಾಡಿದ್ದೀರಿ. ಅಂದರೆ, ಈಗ ನಾವೇನು ತಿಳಿದುಕೊಳ್ಳಬೇಕು? ನೀವು ಇಷ್ಟೊಂದು ಅಭಿಮಾನವಿಟ್ಟು, ಆ ಕೆಲಸಗಳ ಬಗ್ಗೆ ಗುಣಮಟ್ಟದ ಬಗ್ಗೆ ಕಾರ್ಯೋನ್ಮುಖರಾಗಿದ್ದರೂ, ಅದನ್ನು ಕಾರ್ಯಗತಗೊಳಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ, ಸರ್ಕಾರದಿಂದ, ನಿಮಗೆ ಸಹಕಾರ ಸಿಗಲಿಲ್ಲವೆಂದು ನಾವು ಭಾವಿಸಿಕೊಳ್ಳಬಹುದಾ?

ಶ್ರೀ ಆರ್. ಅಶೋಕ್: ಈಗಾಗಲೇ ಲೋಕಾಯುಕ್ತ ತನಿಖೆ ನಡೆಸುತ್ತಿದೆ. ಯಾರು ಭ್ರಷ್ಟರಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಶೋಕ್‌ರವರೆ, ತಾವು ಹೇಳಿದ್ದೆಲ್ಲಾ correct. ಇವೆಲ್ಲವೂ ಪತ್ರಿಕೆಯಲ್ಲಿ ಬಂದ ತಕ್ಷಣ, next day ತಾವು ಇದರಲ್ಲಿ ಅವ್ಯವಹಾರವಾಗಿರುವುದು ಸತ್ಯ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಿರಿ. 100 ಕೋಟಿ ರೂಪಾಯಿಗಳಾಯಿತು, 1 ಕೋಟಿ ರೂಪಾಯಿಯಾಯಿತು, 1 ಪೈಸೆಯದಾಯಿತೋ, ತಪ್ಪಾಗಿದೆ ತಾನೇ? ಅದಕ್ಕೆ ತಾವು ಸದನ ಸಮಿತಿ ನೇಮಕ ಮಾಡಿ, ಸಿಬಿಐಗೆ ವಹಿಸಿ, ಯಾರ್‍ಯಾರಿದ್ದಾರೋ, ಅವರೆಲ್ಲರೂ ಶಿಕ್ಷೆಗೊಳಗಾಗಲಿ.

ಶ್ರೀ ಕೆ.ಚಂದ್ರಶೇಖರ್: ಈಗ ಮಾನ್ಯ ಅಶೋಕ್‌ರವರು ಹೇಳಿದಂತೆ, ನಾನು ಹೇಳಿದ ಮಾತು ಸತ್ಯ. ಪಾಲಿಕೆ ವ್ಯಾಪ್ತಿಗೆ ಟೆಂಡರ್‌ಗೆ administrative approval ಕೊಡುವುದಕ್ಕೆ ಕೇವಲ 1 ಕೋಟಿ ರೂಪಾಯಿಗೆ ಮಾತ್ರ power ಇದೆ. ಮಿಕ್ಕಿದೆಲ್ಲಾ ಸರ್ಕಾರಕ್ಕೇ ಇರುವುದು, ಪಾಲಿಕೆಗಿಲ್ಲ. ಅದು ಯಾವುದೇ ಕಾರಣಕ್ಕೂ ಇಲ್ಲ. ನಾನು ಏನು ಹೇಳುತ್ತಿದ್ದೇನೋ, ಅದು ಸರಿ. ನಾನು ಹೇಳಿದ್ದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಸವಿಸ್ತಾರವಾಗಿ ಬರಬೇಕೆಂಬ ಉದ್ದೇಶದಿಂದ ಹೇಳಿದ್ದೇನೆಯೇ ಹೊರತು, ಇದು ಸತ್ಯವಾದ ಮಾತು.

ಶ್ರೀ ಆರ್.ಅಶೋಕ್: without resolutions ಸರ್ಕಾರಕ್ಕೆ ಯಾವುದೂ ಬರುವುದಿಲ್ಲ.

ಶ್ರೀ ಕೆ.ಚಂದ್ರಶೇಖರ್: resolution ಬರುತ್ತದೆ.

ಉಪಾಧ್ಯಕ್ಷರು: ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ವಿ. ಸೋಮಣ್ಣ: ಮಾನ್ಯ ಉಪಾಧ್ಯಕ್ಷರೆ, 3 ಕೋಟಿ ರೂಪಾಯಿಗಳಾಗಲಿ, 500 ಕೋಟಿ ರೂಪಾಯಿಗಳಾಗಲಿ ಅಥವಾ 1 ಕೋಟಿ ರೂಪಾಯಿಯಾಗಲಿ, 10 ಕೋಟಿ ರೂಪಾಯಿಗಳಾಗಲಿ, ಮಹಾನಗರ ಪಾಳಿಕೆ ಆಯುಕ್ತರು ಮಂಡನೆ ಮಾಡಿದ ನಿರ್ಣಯವನ್ನು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನ ಮಾಡಿ, ಸಮಿತಿಗೆ ಹೋಗಿ ನಂತರ ಅದು ಸರ್ಕಾರಕ್ಕೆ ಬರುತ್ತದೆ. ಆ ಯೋಜನೆಗಳ ಬಗ್ಗೆ ತೀರ್ಮಾನ ಮಾಡುವ ಅಧಿಕಾರ ಸರ್ಕಾರಕ್ಕೆ ಇದ್ದರೂ ಏನೇನು formalities ಇರುತ್ತದೋ, ಅದನ್ನೆಲ್ಲಾ ಮುಗಿಸಿಕೊಂಡೇ ಇಲ್ಲಿಗೆ ಬಂದಿರುವುದು. ಅದಕ್ಕೆ ತಾವು ಏನೂ ಮಾಡಬೇಕಾಗಿಲ್ಲ. ಇದು ಎಷ್ಟು ಸೂಕ್ಷ್ಮವಾಗಿದೆ, ಇದು 600 ಚಿಲ್ಲರೆ ಕೋಟಿ ರೂಪಾಯಿಗಳ ಯೋಜನೆ ಏನಿದೆ, ಇದು 900 ಚಿಲ್ಲರೆ ಕೋಟಿ ರೂಪಾಯಿಗಳಾಗಿದೆ. 138 ಕೋಟಿ

ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೀರಿ. ಇನ್ನು 45–46 ಕೋಟಿ ರೂಪಾಯಿಗಳ ಬಿಲ್ balance ಇದೆ. ಅದರಲ್ಲಿ 14–18 ಕೋಟಿ ರೂಪಾಯಿಗಳು ಹೂಳೆತ್ತುವ ಕೆಲಸ ಆಗಿದೆ. ಇನ್ನು ಉಳಿದಿರುವ RCC retaining wall ಮಾಡಿದ್ದೀರಿ, bridges ಮಾಡಿದ್ದೀರಿ, ಮತ್ತೊಂದು ಮಾಡಿದ್ದೀರಿ, ಏನೇನು ಆಗಿದೆ, ತಾಂತ್ರಿಕ ದೋಷಗಳಾಗುವುದಕ್ಕೆ ಅಧಿಕಾರಿಗಳ ಜವಾಬ್ದಾರಿ ಏನು? ಅವರ ಇಚ್ಛಾಶಕ್ತಿ ಏನು? ಅದಕ್ಕೋಸ್ಕರ, ಇವತ್ತು ಒಂದು ದ್ವಂದ್ವ ಇದೆ. ಯೋಜನೆಯನ್ನು ಮುಗಿಸಬೇಕಾದರೆ, ಇನ್ನು 900 ಕೋಟಿ ರೂಪಾಯಿಗಳು ಏನು ಬೇಕಾಗುತ್ತದೆ, ಇದಕ್ಕೆ ಕೇಂದ್ರ ಸರ್ಕಾರದ ನೆರವು ಸಿಗುವುದಿಲ್ಲ. ಆದ್ದರಿಂದ ಇದನ್ನು complete ಮಾಡುವುದಕ್ಕೆ ಕಾರ್ಯೋನ್ಮುಖರಾಗುತ್ತೀರಾ? ಇಂತಹ ತಾಂತ್ರಿಕ ದೋಷಗಳಿಂದ ಅವ್ಯವಸ್ಥಿತವಾಗಿರುವ ಯೋಜನೆಯನ್ನು ನಾವು ಕೇವಲ ಇದರೊಳಗೆ ಮಾಡಿಕೊಂಡು ಇರುವುದರ ಬದಲಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಇದಕ್ಕೊಂದು ಪೂರ್ಣಾವಧಿಯ ವಿರಾಮ ಕೊಡಬೇಕಾಗುತ್ತದೆ. ದಯಮಾಡಿ ತಾವು ದೊಡ್ಡ ಮನಸ್ಸು ಮಾಡಿ, ಇಂತಹ ತಾಂತ್ರಿಕ ದೋಷಗಳನ್ನು ಸರಿಪಡಿಸುವುದಕ್ಕೆ ತಾವೇ ತಮ್ಮ ಅಧ್ಯಕ್ಷತೆಯಲ್ಲೇ ಒಂದು ಕಮಿಟಿ ನೇಮಕ ಮಾಡಿ, ಕಮಿಟಿಗೆ ಇದನ್ನು ವಹಿಸಿಕೊಟ್ಟರೆ, ಪ್ರಾಯಶಃ ನನಗನಿಸುತ್ತದೆ: ಇದೊಂದು ಭಾರಿ ಪ್ರಮುಖವಾದ ಯೋಜನೆ. ಇದನ್ನು ಮತ್ತೆ ಮತ್ತೆ ನಾವು ಕೆದುಕುತ್ತಾ ಹೋದರೆ, ಆಗುವುದಕ್ಕಿಂತಲೂ ಹೆಚ್ಚಾಗಿ ಸಾಮಾನ್ಯ ಜನರಿಗೆ ಏನು ಹೊರೆಯಾಗಿದೆ, ಇದು ತಮ್ಮ ಗಮನಕ್ಕೆ ಬರಬೇಕಾಗುತ್ತದೆ. 12 ಅಂಶಗಳು ತಾವೇ ಕೊಟ್ಟಿದ್ದೀರಿ. ಮೋರಿಗಳ ಹೂಳನ್ನು ತೆಗೆಯುವುದು, ಮೋರಿಗಳನ್ನು ಅಗಲಗೊಳಿಸುವುದು, ಆಳಗೊಳಿಸುವುದು ಈ ತರಹದ 12 ಅಂಶಗಳನ್ನು ಕೊಟ್ಟಿದ್ದೀರಲ್ಲಾ, ಇದನ್ನು ವ್ಯವಸ್ಥಿತವಾಗಿ ಮಾಡಬೇಕಾದರೆ, ಇದರ ತಾಂತ್ರಿಕ ವ್ಯವಸ್ಥೆಯನ್ನು ಸರಿಪಡಿಸಲು ಕ್ರಮಕೈಗೊಳ್ಳಿ ಇದು ಬಡ ಬೋರೇಗೌಡನ ದುಡ್ಡು. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ಇದು tax payers ದುಡ್ಡು. ಅದುದರಿಂದ ದಯಮಾಡಿ ಈ 12 ಅಂಶಗಳನ್ನು ಏನು ಕೊಟ್ಟಿದ್ದೀರಿ ಈ ತಾಂತ್ರಿಕ ವ್ಯವಸ್ಥೆಗೆ ಅನುಗುಣವಾಗಿ ಈ ಯೋಜನೆಯನ್ನು ಪೂರ್ಣಗೊಳಿಸಲು ತಾವು ದಯಮಾಡಿ ಕಾರ್ಯೋನ್ಮುಖರಾಗುವಾಗ ಇಂಥ ತಾಂತ್ರಿಕ ದೋಷವನ್ನು ಸರಿಪಡಿಸುವುದಕ್ಕೆ ನಿಮ್ಮ ಅವಧಿಯಲ್ಲಿ ಆಗದಿದ್ದರೆ ಇನ್ನು ಯಾರ ಅವಧಿಯಲ್ಲಿ ಆಗುತ್ತದೆ ತಾವು ಚಿಂತನೆ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಯವರು): ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರ ಯಾವುದೇ ವಿಷಯವನ್ನು ಹಗುರವಾಗಿ

ತೆಗೆದುಕೊಳ್ಳುತ್ತಿಲ್ಲ ಎಂಬುದನ್ನು ಮೊದಲು ಸ್ಪಷ್ಟೀಕರಣ ನೀಡಬಯಸುತ್ತೇನೆ. ನರೇಂದ್ರಬಾಬುರವರು ಮಾತನಾಡಬೇಕಾದರೆ ಬಹಳ ಹಗುರವಾಗಿ ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ. ಅನಂತರ ಕೃಷ್ಣಪ್ಪನವರು ಏನೋ 18 ತಿಂಗಳಲ್ಲಿ ಅವರ ಏರಿಯಾಗೆ ನೀರು, ವಿದ್ಯುತ್ ಸಿಗದಂತೆ ಮಾಡಿದ್ದೇವೆ ಎಂಬುವಂತೆ ಹೇಳುತ್ತಾರೆ. ಇದರ ಪಾಪದ ಕೂಸನ್ನು ಹೆತ್ತಿರುವವರು ನೀವು. ಈ ಸರ್ಕಾರ ನೀವು ಅಲ್ಲ ಎಂಬುದುನ್ನು ತಿಳಿದುಕೊಳ್ಳಬೇಕು. ನೀವೂ ಮಂತ್ರಿಯಾಗಿದ್ದಿರಿ, ನೀವು ಕೆಲಸ ಮಾಡಬೇಡಿ ಎಂದು ನಮ್ಮನ್ನು ನಾವು ಹಿಡಿದುಕೊಂಡಿದ್ದೆವೋ? ಇವತ್ತು ಈ ಸರ್ಕಾರದ ಮೂಲಕ ಏನು ಹೂಳ ಎತ್ತತಕ್ಕ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕರು ಪದೇ ಪದೇ ಪದೇ 643 ಕೋಟಿ ಎಂದು ಹೇಳಿದರು. ಹೂಳು ಎತ್ತುವುದಕ್ಕೆ 643 ಕೋಟಿ ಕೊಟ್ಟಿದ್ದೀರೆಂದು ನೀವು ಹೇಳುತ್ತಿದ್ದೀರಿ. ಶಿವಕುಮಾರ್‌ರವರು ಮಾತನಾಡತಕ್ಕ ಸಂದರ್ಭದಲ್ಲಿ 22 ಕೋಟಿ ಎಂದು ಏನು ಹೇಳಿದ್ದಾರೆ, ಇವತ್ತು ಈ ಸರ್ಕಾರ ತಪ್ಪಾಗಿರುವುದನ್ನು ಗಮನಸಿ ನೀವು ಏನು 120% 130% ಸ್ವೇಚ್ಛಾಚಾರವಾಗಿ above ಕೊಟ್ಟರು ಎಂದು ಹೇಳಿದ್ದೀರಿ, ಆ ದೃಷ್ಟಿಯಿಂದಲೇ ಅದು ನಮ್ಮ ಗಮನಕ್ಕೆ ಬಂದ ತಕ್ಷಣವೇ 4 ಕೋಟಿ ಹಣವನ್ನು recovery ಮಾಡುವುದಕ್ಕೆ ಏಕೆ ತೀರ್ಮಾನ ಮಾಡಿದ್ದೇವೆ ಎಂದರೆ ಈ ರೀತಿ ಸ್ವೇಚ್ಛಾಚಾರವಾಗಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದ ತಕ್ಷಣವೇ ಈಗಾಗಲೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಇದನ್ನು ಮುಚ್ಚಿ ಹಾಕತಕ್ಕ ಕೆಲಸವನ್ನು ಸರ್ಕಾರದವರು ನಾವು ಮಾಡಲಿಲ್ಲ. ಇವತ್ತು ಕೇಂದ್ರ ಸರ್ಕಾರ ಕೊಡಲಿ, ರಾಜ್ಯ ಸರ್ಕಾರ ಕೊಡಲಿ ಇಲ್ಲದಿದ್ದರೆ ಮಹಾನಗರ ಪಾಲಿಕೆಯ ದುಡ್ಡೇ ಆಗಿರಲಿ.ಇವತ್ತು ಯಾವುದೇ ಒಂದು ಯೋಜನೆಯನ್ನು ಸಾರ್ವಜನಿಕರಿಗೆ ತರತಕ್ಕ ಸಂದರ್ಭದಲ್ಲಿ ಸರಿಯಾದ ಗುಣಮಟ್ಟದ ಕೆಲಸವೇನಾಗಬೇಕಾಗುತ್ತದೆ, ಅದರ ಬಗ್ಗೆ ಗಮನ ಕೊಡುವ ನಿಟ್ಟಿನಲ್ಲಿ ಈಗಾಗಲೇ ಏನು ಗಮನ ಹರಿಸಿದ್ದೇವೆ, ಇವತ್ತು ಸರ್ಕಾರ ಯಾರು ಅಧಿಕಾರಿಗಳು ಇದರಲ್ಲಿ ತಪ್ಪಿತಸ್ಥರಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ನಾವು ಹೆಜ್ಜೆ ಇಟ್ಟಿದ್ದೇವೆ, ಈ ಒಂದು ವಿಷಯದಲ್ಲಿ ಸರ್ಕಾರ ತಪ್ಪಿತಸ್ಥರ ಮೇಲೆ ನಿರ್ಣಯವನ್ನು ಮಾಡುವುದಕ್ಕೆ ಅವರಿಗೆ ಏನು ಶಿಕ್ಷೆ ಕೊಡಬೇಕಾಗುತ್ತೆ, ಅದಕ್ಕೆ ಎಲ್ಲಾ ರೀತಿಯ ಶಕ್ತಿಯನ್ನು ನಾವು ಕೊಟ್ಟಿದ್ದೇವೆ, ಈಗಾಗಲೇ ಅದರ ಬಗ್ಗೆ ಗಮನ ಹರಿಸಿರುವುದರಿಂದ ಇಲ್ಲಿ ನೀವು ಏನು ಹೇಳಿರುವ ರೀತಿಯಲ್ಲಿ ಯಾವುದೋ ದೊಡ್ಡಮಟ್ಟದಲ್ಲಿ ಅವ್ಯವಹಾರ ಎನ್ನುವುದಕ್ಕಿಂತ ಹೆಚ್ಚಾಗಿ 4 ಕೋಟಿ ಅವ್ಯವಹಾರ ಆಗಿದೆ. ಆ

ಹಣವನ್ನು ಈಗಾಗಲೇ ವಸೂಲಿ ಮಾಡಿದ್ದೇವೆ. ತಾವು ಇದರ ಬಗ್ಗೆ ಹೇಳಿವುದಕ್ಕಿಂತ ಮೊದಲೇ ಆ ಹಣವನ್ನು ವಸೂಲಿ ಮಾಡಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ಸಿ.ಬಿ.ಐ. enquiry, ಸದನದ ಸಮಿತಿಯ ಅವಶ್ಯಕತೆ ಇಲ್ಲ. ಸರ್ಕಾರ ಇವತ್ತು ಸಮರ್ಥವಾಗಿದೆ. ಯಾರು ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ. ಅಧಿಕಾರಿಗಳನ್ನು ಅಮಾನತ್ತು ಮಾಡತಕ್ಕದ್ದು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ನಾವು ಈಗಾಗಲೇ ತಿರ್ಮಾನ ಮಾಡಿದ್ದೇವೆ. ಈ ಒಂದು ವಿಷಯದಲ್ಲಿ ನಾವು ಯಾವುದನ್ನು ಮುಚ್ಚಿ ಇಡುವ ಪ್ರಶ್ನೆ ಇಲ್ಲ. ಈ ಒಂದು ವಿಷಯದಲ್ಲಿ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ, ಅದರ ಜೊತೆಗೆ ಮುಂದೆ ಮಾಡಿಸತಕ್ಕ ಕೆಲಸದಲ್ಲಿ ಈ ರೀತಿ ಯಾವುದೇ ರೀತಿಯ ಸ್ವೇಚ್ಛಾಚಾರದ ತೀರ್ಮಾನವನ್ನು ಅಧಿಕಾರಿಗಳು ಮಾಡದೇ ಇರುವ ರೀತಿಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎಂಬುದನ್ನು ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. 643 ಕೋಟಿ ಎಂದು ನಾವೇನು ಹೇಳಿದ್ದೇವೆ, ಅದು ಹೂಳೆತ್ತುವ ಒಟ್ಟಾರೆ ಕಾರ್ಯಕ್ರಮಕ್ಕೆ ಇಟ್ಟಿದ್ದಾರೆ. 18 ಕೋಟಿ ಅವ್ಯವಹಾರ ವಾಗಿದೆಯೆಂದು ಈಗಾಗಲೇ ತಾವು ಹೇಳಿದ್ದೀರಿ. ನಮ್ಮ ಅಶೋಕ್‌ರವರು 3 ತಿಂಗಳ ಹಿಂದೆಯೇ ಅವ್ಯವಹಾರವಾಗಿದೆ. ನಾನು ಅಂದೇ ತನಿಖೆ ಮಾಡಬೇಕೆಂದು ಹೇಳಿದ್ದೇನೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಇಲ್ಲಿ ಅವ್ಯವಹಾರ ಆಗಿದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಇದು ಕೇಂದ್ರ ಸರ್ಕಾರದ ಹಣ. ಇದು ಕೇವಲ ಬೆಂಗಳೂರು, ಮೈಸೂರು ನಗರಕ್ಕೆ ಕೊಟ್ಟಿಲ್ಲ. ಇಡೀ ರಾಷ್ಟ್ರದಲ್ಲಿ 1 ಲಕ್ಷ 34 ಕೋಟಿ ಕೊಟ್ಟಿದ್ದಾರೆ. ಇವತ್ತು 22. 535 ಕೋಟಿ ಬೆಂಗಳೂರು ನಗರಕ್ಕೆ ಏನು ಬರುತ್ತದೆ, ಪ್ರಾರಂಭದಲ್ಲೇ ಈ ರೀತಿಯ ಅವ್ಯವಹಾರ ಅದರೆ ಹೇಗೆ? 4 ಕೋಟಿ ಅವ್ಯವಹಾರದ ಬಗ್ಗೆ ನಮಗೆ ಗೊತ್ತಾದ ಮೇಲೆ ಅದನ್ನು ವಸೂಲಿ ಮಾಡಿದ್ದೇವೆ, ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಎಲ್ಲಾ ಸದನದ ಸದಸ್ಯರು ಇವತ್ತಿನ ದಿವಸ ಇದರ ಬಗ್ಗೆ ಸದನದ ಸಮಿತಿ ಆಗಬೇಕೆಂದು ಹೇಳುತ್ತಿದ್ದಾರೆ. ಹೂಳೆತ್ತುವ ಕೆಲಸ ಎಷ್ಟರ ಮಟ್ಟಿಗೆ ಆಗಿದೆ ನೋಡಬೇಕು. ಅದಕ್ಕೆ ಒಂದು ಸದನದ ಸಮಿತಿ ಮಾಡಿ. ಕೇಂದ್ರ ಸರ್ಕಾರದ ಹಣ ಆಗಿರುವ ಕಾರಣ ಸಿ.ಬಿ.ಐ. ತನಿಖೆ ಆಗಲಿ ಎಂದು ಬೇಡಿಕೆ ಇದೆ. ಇದರ ಬಗ್ಗೆ ತಾವು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ನಾವು ಧರಣೆ ಮಾಡಲು ತೀರ್ಮಾನ ಮಾಡಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಬಾವಿಯಲ್ಲಿ ಧರಣಿ ಮಾಡಲು ಬಂದರು)

ಸಭಾಧ್ಯಕ್ಷರ ತೀರ್ಪು:

ಅ) ವಿಷಯ: ಮಾನ್ಯ ಸದಸ್ಯರಾದ ಶ್ರೀ. ದಿನೇಶ್ ಗುಂಡೂರಾವ್‌ರವರು "ಈಸಂಜೆ" ದಿನಪತ್ರಿಕೆಯ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ತೀರ್ಪು:

ಉಪಾಧ್ಯಕ್ಷರು: ಮಾನ್ಯ ಸದಸ್ಯರಾದ ಶ್ರೀ. ದಿನೇಶ್ ಗುಂಡೂರಾವ್ ಅವರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಾಮಾವಳಿಗಳ ನಿಯಮ 192ರ ಮೇರೆಗೆ ಸೂಚನೆಯನ್ನು ನೀಡಿ ದಿನಾಂಕ:04.07.2007ರ ಈ ಸಂಜೆ ದಿನಪತ್ರಿಕೆಯನ್ನು ಲಗತ್ತಿಸಿ ಅವರ ಹಾಗೂ ಅವರ ಕುಟುಂಬದ ಬಗ್ಗೆ ಇಲ್ಲಸಲ್ಲದ ಸತ್ಯಕ್ಕೆ ದೂರವಾದ ಸುದ್ದಿಗಳನ್ನು ಪ್ರಕಟಿಸಲಾಗಿದೆ ಹಾಗೂ ಈ ಸುದ್ದಿಯಿಂದ ಅವರ ಹಕ್ಕಿಗೆ ಚ್ಯುತಿಯಾಗಿದೆಯೆಂದು ತಿಳಿಸಿ, ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೋರಿರುತ್ತಾರೆ.

ಈ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದಾಗ ಮಾನ್ಯ ಸದಸ್ಯರುಗಳಾದ ಶ್ರೀ ದಿನೇಶ್ ಗುಂಡೂರಾವ್, ಶ್ರೀ ಕೆ.ಆರ್. ರಮೇಶ್ ಕುಮಾರ್, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಕೃಷ್ಣಬೈರೇಗೌಡ, ವಿರೋಧ ಪಕ್ಷದ ನಾಯಕರು, ಶ್ರೀ ಆರ್.ವಿ. ದೇಶಪಾಂಡೆ, ಹಾಗೂ ವಾಟಾಳ್ ನಾಗರಾಜ್ ಇವರುಗಳ ಚರ್ಚೆಯಲ್ಲಿ ಭಾಗವಹಿಸಿ ಈ ಸಂಜೆ ಪ್ರಕಟಣೆಯಿಂದ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿಯಾಗಿದೆಯೆಂದು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಲು ಒತ್ತಾಯಿಸಿರುತ್ತಾರೆ. ಸರಕಾರದ ವತಿಯಿಂದ ಮಾನ್ಯ ಕಂದಾಯ ಸಚಿವರು ಮಾತನಾಡಿ ಈ ಪ್ರಕರಣವು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ.

ಎರಡೂ ಕಡೆಯ ವಾದವನ್ನು ಪರಿಶೀಲಿಸಿರುತ್ತೇನೆ. ಈ ಸಂಜೆ ಪ್ರಕಟಣೆಯ ಪತ್ರಿಕೆಯಲ್ಲಿ □□□□□□□□□□" ಪ್ರತಿಷ್ಟಿತ 288 ಪ್ರಭಾವಿ ವ್ಯಕ್ತಿಗಳು ಸೇರಿದಂತೆ 26 ಸಾವಿರ ಮಂದಿ ಸರ್ಕಾರಿ ಭೂಮಿ ಒತ್ತುವರಿ ಮಾಡಿರುವುದು ಬಯಲಾಗಿದೆ. ಬೆಂಗಳೂರು ನಗರ ಮತ್ತು ಹೊರವಲಯದಲ್ಲಿ ಕೊಟ್ಯಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಭೂಮಿ ಒತ್ತುವರಿ ಪತ್ತೆ ಹಚ್ಚಲು